ನಿಯಂತ್ರಕರು

ರಾಜ್ಯ ಲೆಕ್ಕಪತ್ರ ಇಲಾಖೆ

ಬೆಂಗಳೂರು

# ನಗರ ಸ್ಥಳೀಯ ಸಂಸ್ಥೆಗಳ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿ

## 31 ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷ

# ನಗರ ಸ್ಥಳೀಯ ಸಂಸ್ಥೆಗಳ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿ 2009-10

## ಭಾಗ-I

## ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳು

### ವಿಷಯ ಸೂಚಿ


| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| | **ಅಧ್ಯಾಯ-1 ನಗರ ಸ್ಥಳೀಯ ಸಂಸ್ಥೆಗಳ ಸ್ಥೂಲನೋಟ** | |
| | ಪೀಠಿಕೆ. | 1 |
| 1.1 | ಹಿನ್ನೆಲೆ. | 1 |
| 1.2 | ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆ. | 2 |
| 1.3 | ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ರಂತೆ ಮುನಿಸಿಪಲ್ ಕೌನ್ಸಿಲ್‌ಗಳ ನಿರ್ಬಂಧಕ, ವಿಶೇಷ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು. | 3 |
| 1.4 | ಲೆಕ್ಕಪತ್ರಗಳ ಲೆಕ್ಕಪರಿಶೋಧನೆ. | 3 |
| | **ಅಧ್ಯಾಯ-2 ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ಥೂಲನೋಟ** | |
| 2.1 | ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳು. | 6 |
| 2.2 | ಸ್ಥಳೀಯ ಸಂಸ್ಥೆಗಳ ನಿಧಿ. | 7 |
| 2.3 | ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯ. | 7 |
| 2.4 | ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಅನುಷ್ಠಾನ. | 8 |
| 2.5 | ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ. | 8 |
| 2.6 | 2009-10 ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಮೂಲಗಳಿಂದ ಬಂದಂತಹ ಜಮೆ ಹಾಗೂ ಆದಾಯದ ವಿವರಗಳು. | 9 |
| 2.7 | 2009-10 ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಶೀರ್ಷಿಕೆಗಳಲ್ಲಿ ಭರಿಸಲಾದ ವೆಚ್ಚದ ವಿವರಗಳು. | 9 |
| | **ಅಧ್ಯಾಯ-3 ಲೆಕ್ಕಪರಿಶೋಧನಾ ಫಲಿತಾಂಶಗಳು** | |
| 3.1 | ಜಿಲ್ಲಾ ಮಟ್ಟದ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಯ ಸಹಾಯಕ ನಿಯಂತ್ರಕರಿಂದ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಬಿಡುಗಡೆ. | 10 |
| 3.2 | 2009-10ನೇ ಸಾಲಿನ ಅಂತ್ಯಕ್ಕೆ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಸ್ತಾಪಿಸಿರುವ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ಬಾಕಿ ಕಂಡಿಕೆಗಳನ್ನು ತೀರುವಳಿ ಮಾಡದೇ ಇರುವುದು. | 10 |
| 3.3 | ಕಾಮಗಾರಿ ಬಿಲ್ಲುಗಳು ಹಾಗೂ ಇತರೆ ವೆಚ್ಚಗಳ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವ ಕುರಿತು. | 11 |
| 3.4 | ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಜಿಲ್ಲಾ ನಿರ್ಮಿತಿ ಕೇಂದ್ರಗಳಿಗೆ ಮುಂಗಡ ಹಣ ಪಾವತಿಸಿರುವುದು. | 11 |
| 3.5 | ಚಳ್ಳಕೆರೆ ಪುರಸಭೆಯಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಯಲ್ಲಿ ನಿಯಮಗಳಿಗೆ ಹೊರತಾಗಿ ₹.3.50 ಲಕ್ಷಗಳನ್ನು ಪಾವತಿ ಮಾಡಿರುವ ಬಗ್ಗೆ. | 13 |
| 3.6 | ಕೊಟೇಷನ್‌ನಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚಿಗೆ ಹಣ ಪಾವತಿಸಿರುವುದು. | 13 |

## ಅನುಬಂಧಗಳು


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| | **ನಗರ ಸ್ಥಳೀಯ ಸಂಸ್ಥೆಗಳು** | |
| 1 | 2009–10ರ ವರ್ಷದಲ್ಲಿ ಲೆಕ್ಕಪರಿಶೋಧನೆ ಆದ ನಗರ ಸ್ಥಳೀಯ ಸಂಸ್ಥೆಗಳ: ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸ್ವೀಕೃತಿ ಮತ್ತು ವೆಚ್ಚಗಳ ಜಿಲ್ಲಾವಾರು ವಿವರಣಾ ಪಟ್ಟಿ. | 51 |
| 2 | 2009–10ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ಮೂಲಗಳಿಂದ ಆದ ಜಮೆ ಮತ್ತು ಆದಾಯದ ವಿವರಗಳು. | 52 |
| 3 | 2009–10ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ಶೀರ್ಷಿಕೆಗಳಲ್ಲಿ ಭರಿಸಲಾದ ವೆಚ್ಚದ ವಿವರಗಳು. | 53 |
| 4 | 2009–10ನೇ ಸಾಲಿನ ಅಂತ್ಯಕ್ಕೆ ಲೆಕ್ಕಪರಿಶೋಧನಾ ವರದಿಗಳಲ್ಲಿ ದಾಖಲಿಸಿರುವ ಆಕ್ಷೇಪಣೆ ಮತ್ತು ವಸೂಲಾತಿ ಸೂಚಿಸಿದ ಬಾಕಿ ಕಂಡಿಕೆಗಳನ್ನು ತೀರುವಳಿ ಮಾಡದೇ ಇರುವುದು. | 54 |
| 5 | ಕಾಮಗಾರಿ ಬಿಲ್ಲುಗಳು ಹಾಗೂ ಇತರೆ ವೆಚ್ಚಗಳ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವುದು. | 55 |
| 6 | ಶಾಸನಬದ್ಧ ಕಟಾವಣೆಗಳು ಮತ್ತು ಉಪಕರಗಳು ಸರ್ಕಾರಕ್ಕೆ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡದಿರುವುದು. | 56 |
| | **ಮಹಾನಗರ ಪಾಲಿಕೆಗಳು** | |
| 7 | ಮಹಾನಗರ ಪಾಲಿಕೆಗಳ ಆಯವ್ಯಯ ಅಂದಾಜುಗಳ ವಿವರಗಳು | 57 |
| 8 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2008–09ರ ಸಾಲಿನ ಆಯವ್ಯಯ ಅಂದಾಜುಗಳಿಗೂ ವಾಸ್ತವಿಕ ಲೆಕ್ಕಗಳಿಗೂ ವ್ಯತ್ಯಾಸದ ವಿವರಗಳು. | 58 |
| 9 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿಗಳಲ್ಲಿ 2008–09ನೇ ಸಾಲಿನಲ್ಲಿ ತಿರಸ್ಕೃತಗೊಂಡಿರುವ ಚೆಕ್ಕುಗಳ ವಿವರ. | 59 |
| 10 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳಲ್ಲಿ ಒಂದೇ ಇ.ಎಂ.ಡಿ. ಡಿಡಿಯನ್ನು ಎರಡು ಕಾಮಗಾರಿಗಳಿಗೆ ನಮೂದಿಸಿರುವುದು. | 60 |
| 11 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಕಾಮಗಾರಿ ಬಿಲ್ಲುಗಳಲ್ಲಿ ತಪ್ಪು ಲೆಕ್ಕಾಚಾರದಿಂದ ಹೆಚ್ಚಿನ ಪರಿಮಾಣಕ್ಕೆ ಹಣ ಪಾವತಿಸಿರುವ ವಿವರಗಳು. | 62 |

## ಭಾಗ-1
## ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳು

***

**ಪೀಠಿಕೆ**

ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ರ ಕಲಂ 290 (ಸರ್ಕಾರದ ಅಧಿಸೂಚನೆ ಸಂ. PLM 11 MLR (1)65 ದಿನಾಂಕ:02-9-1965) ಪ್ರಕಾರ ರಾಜ್ಯ ಲೆಕ್ಕಪತ್ರ ಇಲಾಖೆಯ ಜಿಲ್ಲಾ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರುಗಳನ್ನು ನೇಮಕಮಾಡಲಾಗಿದೆ.

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ ಕಲಂ 295(6), ದಿನಾಂಕ:14-03-2012ರಿಂದ ಜಾರಿಗೆ ಬಂದಿರುವ ಪ್ರಕಾರ, ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಅದರಂತೆ, ಸದರಿ ಸಂಸ್ಥೆಗಳ 31 ಮಾರ್ಚ್ 2010ರ ಅಂತ್ಯದ ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇರೆಗೆ ಈ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸಲಾಗಿದೆ.

## ಅಧ್ಯಾಯ -1
## ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಸ್ಥೂಲನೋಟ

### 1.1 ಹಿನ್ನೆಲೆ:

ಕೇಂದ್ರ ಸರ್ಕಾರವು 1994 ರಲ್ಲಿ ಜಾರಿಗೊಳಿಸಲಾದ 74 ನೇ ಸಂವಿಧಾನಿಕ ತಿದ್ದುಪಡಿಯಂತೆ ಪಟ್ಟಣ ಪಂಚಾಯತಿಗಳನ್ನು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ (351ನೇ ಪ್ರಕರಣ) ವ್ಯಾಪ್ತಿಗೆ ತರುವ ಮೂಲಕ ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯಾಪ್ತಿಯು ಮತ್ತಷ್ಟು ವಿಸ್ತಾರವಾಗಿರುತ್ತದೆ. ನಗರ ಮತ್ತು ಪಟ್ಟಣ ಪಂಚಾಯಿತಿಗಳ ಆಡಳಿತಕ್ಕೆ ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ರಚನೆಯ ಉದ್ದೇಶವನ್ನು ಹೊಂದಿದ್ದ ಈ ತಿದ್ದುಪಡಿಯು ಸಂವಿಧಾನದ 12ನೇ ಅನುಸೂಚಿಯಲ್ಲಿ ಪಟ್ಟಿ ಮಾಡಿದ 18 ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿಗೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸೇವೆಗಳನ್ನು ನೀಡಲು ನಗರ ಸ್ಥಳೀಯ ಸಂಸ್ಥೆಗಳನ್ನು ದಕ್ಷವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳನ್ನಾಗಿ ಬಲಪಡಿಸಿತು. ಇದರನ್ವಯ ನಗರ/ಪಟ್ಟಣಗಳಲ್ಲಿನ ಸ್ಥಳೀಯ ಸಂಸ್ಥೆಗಳ ರಚನೆಯಲ್ಲಿ ಪ್ರಧಾನವಾಗಿ ಎರಡು ಬದಲಾವಣೆಗಳನ್ನು ತರಲಾಗಿದೆ.

(i) ಪ್ರತಿ 5 ವರ್ಷಗಳಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದು ಮತ್ತು ಮೇಲ್ವಿಚಾರಣೆ ಮಾಡಲು ಸ್ವತಂತ್ರವಾದ ರಾಜ್ಯ ಚುನಾವಣಾ ಆಯೋಗದ ಸ್ಥಾಪನೆ ಮಾಡುವುದು.

(ii) ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಸಮೀಕ್ಷಿಸಲು ಪ್ರತಿ 5 ವರ್ಷಕ್ಕೊಮ್ಮೆ ರಾಜ್ಯ ಹಣಕಾಸು ಆಯೋಗದ ರಚನೆ ಮಾಡುವುದು.

ರಾಜ್ಯದಲ್ಲಿ ಒಟ್ಟು 211 (ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ) ನಗರ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದು 2009–10 ರ ಅಂತ್ಯಕ್ಕೆ 189 ಸಂಸ್ಥೆಗಳ ಲೆಕ್ಕ ಪರಿಶೋಧನೆ ಮಾಡಿ ವರದಿಗಳನ್ನು ಆಯಾ ಸಂಸ್ಥೆಗಳಿಗೆ ಹೊರಡಿಸಲಾಗಿದೆ. ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಹಾಗೂ ಅಧಿಸೂಚಿತ ಪ್ರದೇಶದ ಸಮಿತಿಗಳ ಸಂಖ್ಯೆ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ನಗರ ಸ್ಥಳೀಯ ಸಂಸ್ಥೆಗಳು | ಸಂಖ್ಯೆ |
|---|---|---|
| 1. | ನಗರ ಸಭೆಗಳು | 44 |
| 2. | ಪುರಸಭೆಗಳು | 91 |
| 3. | ಪಟ್ಟಣ ಪಂಚಾಯಿತಿಗಳು | 72 |
| 4. | ಅಧಿಸೂಚಿತ ಪ್ರದೇಶ ಸಮಿತಿಗಳು | 04 |
| | ಒಟ್ಟು | **211** |

## 1.2 ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆ.

ಸರ್ಕಾರವು ನಿಗದಿಪಡಿಸಿದ ನಿರ್ದಿಷ್ಟ ಜನಸಂಖ್ಯೆಯುಳ್ಳ ಪ್ರದೇಶಗಳು/ಪಟ್ಟಣಗಳು ನಗರ ಸ್ಥಳೀಯ ಸಂಸ್ಥೆಗಳೆಂದು ಘೋಷಿಸಿ ಅವುಗಳು ವಾರ್ಡ್/ಕ್ಷೇತ್ರಗಳಾಗಿ ರೂಪಿಸಲ್ಪಟ್ಟಿರುತ್ತವೆ. ಈ ಸಂಸ್ಥೆಗಳಿಗೆ ಸರ್ಕಾರವು ನಿಗದಿಪಡಿಸಿದಂತೆ ಪ್ರತಿ 5 ವರ್ಷಕ್ಕೊಮ್ಮೆ ಚುನಾವಣೆ ಮೂಲಕ ಸದಸ್ಯರುಗಳನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಚುನಾಯಿತ ಸದಸ್ಯರಿಂದ ಬಹುಮತವಿರುವ ಒಬ್ಬರು ಅಧ್ಯಕ್ಷರಾಗಿ ಆಯ್ಕೆ ಹೊಂದಿ ಸಭೆಗಳನ್ನು ಆಯೋಜಿಸಿ, ಅಧ್ಯಕ್ಷತೆವಹಿಸುವ ಮತ್ತು ನಿರ್ಣಯಿಸುವ ಅಧಿಕಾರವನ್ನು ಪಡೆದಿರುತ್ತಾರೆ, ಇವರು ಸಂಸ್ಥೆಯ ಸರ್ವಾಂಗೀಣ ಆಡಳಿತಕ್ಕೆ ಜವಾಬ್ದಾರರಾಗಿರುತ್ತಾರೆ. ಅಧ್ಯಕ್ಷರಿಗೆ ಆಡಳಿತದಲ್ಲಿ ಸಹಕರಿಸಲು ಉಪಾಧ್ಯಕ್ಷರು ಮತ್ತು ಚುನಾಯಿತ ಸದಸ್ಯರನ್ನೊಳಗೊಂಡ ನಾಲ್ಕು ಉಪಸಮಿತಿಗಳು ಇರುತ್ತವೆ.

## ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಕಾರಿ ವ್ಯವಸ್ಥೆ:

ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಕಾರಿ ಮುಖ್ಯಸ್ಥರಾಗಿರುತ್ತಾರೆ: ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸಲಾಗುವಂತಹ ಅಧಿಕಾರಗಳನ್ನು ಹೊಂದಿರುತ್ತಾರೆ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಕಾರಿ ವ್ಯವಸ್ಥೆ ಈ ಕೆಳಕಂಡಂತಿರುತ್ತದೆ.




## 1.3 ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ರಂತೆ ಮುನಿಸಿಪಲ್ ಕೌನ್ಸಿಲ್‌ಗಳ ನಿರ್ಬಂಧಕ, ವಿಶೇಷ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು.

ಮುನಿಸಿಪಲ್ ಕೌನ್ಸಿಲ್‌ಗಳ ನಿರ್ಬಂಧಕ, ವಿಶೇಷ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳನ್ನು ಕರ್ನಾಟಕ ಮುನಿಸಿಪಲ್ ಅಧಿನಿಯಮ 1964 ರ ಕಲಂ 87, 88, 89 & 90 ರಲ್ಲಿ ವಿವರಿಸಲಾಗಿದೆ.

## 1.4 ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ:

**1.4.1.** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ಕಲಂ 290ರ ಪ್ರಕಾರ ಸರ್ಕಾರದಿಂದ ನೇಮಕಗೊಂಡ [ಅಧಿಸೂಚನೆ ಸಂಖ್ಯೆ:-PLM 11 MLR (1)65 ದಿ:02-09-1965 ರ ಪ್ರಕಾರ] ರಾಜ್ಯ ಲೆಕ್ಕಪತ್ರ ಇಲಾಖೆಯ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದ ಸಹಾಯಕ ನಿಯಂತ್ರಕರು ಹಾಗೂ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುವ ಲೆಕ್ಕಪರಿಶೋಧನಾಧಿಕಾರಿಗಳು ಮತ್ತು ಪ್ರಥಮ ದರ್ಜೆ ಸಹಾಯಕರು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧಕರಾಗಿರುತ್ತಾರೆ. ಇವರು ಲೆಕ್ಕಪರಿಶೋಧನೆಗಾಗಿ ಕಲಂ 291ರ ಪ್ರಕಾರ ತಾನು ಸೂಕ್ತವೆಂದು ಪರಿಗಣಿಸುವ ಓಚರುಗಳು, ವಿವರಣೆಗಳು, ವಿವರಪಟ್ಟಿಗಳು, ಪತ್ರ ವ್ಯವಹಾರಗಳು, ಟಿಪ್ಪಣಿಗಳು ಇತರೆ ದಸ್ತಾವೇಜುಗಳನ್ನು ಹಾಜರುಪಡಿಸಲು ಬರಹದ ಮೂಲಕ ಕೋರಬಹುದಾಗಿದೆ ಹಾಗೂ ಲೆಕ್ಕಪರಿಶೋಧನಾ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲಿನ ಎಲ್ಲಾ ಲೆಕ್ಕಪತ್ರಗಳು ಮತ್ತು ಇತರೆ ದಾಖಲೆಗಳನ್ನು ನೋಡುವ ಅವಕಾಶವಿರುತ್ತದೆ.

ಕಲಂ 294ರ ಪ್ರಕಾರ ಲೆಕ್ಕಪರಿಶೋಧನಾ ವರದಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು.

(i) ನಿಯಮಗಳಿಗೆ ವ್ಯತಿರಿಕ್ತವಾಗಿ ಕಂಡುಬರುವಂಥ ಪ್ರತಿಯೊಂದು ಸಂದಾಯ,

(ii) ಯಾವನೇ ವ್ಯಕ್ತಿಯ ಅತೀ ನಿರ್ಲಕ್ಷತೆ ಅಥವಾ ದುರ್ವರ್ತನೆಯಿಂದ ಉಂಟಾಗಿರಬಹುದೆಂದು ಕಂಡುಬರುವ ಯಾವುದೇ ಕೊರತೆ ಅಥವಾ ನಷ್ಟದ ಮೊಬಲಗು

(iii) ಸಂಸ್ಥೆಯು ಸ್ವೀಕರಿಸಲೇಬೇಕಾದ, ಆದರೆ ಸ್ವೀಕರಿಸಿ ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವ ಯಾವುದೇ ಮೊತ್ತದ ಮೊಬಲಗು.

(iv) ಮೇಲ್ಕಂಡ (i) (ii) ಮತ್ತು (iii) ರಲ್ಲಿ ನಮೂದಿಸಿರುವುದನ್ನು ಹೊರತುಪಡಿಸಿ ಲೆಕ್ಕಪರಿಶೋಧಕರು ಗಮನಿಸಬಹುದಾದ ಮುಖ್ಯ ಅನುಚಿತತೆ ಅಥವಾ ದೋಷಗಳ ಬಗ್ಗೆ ವಿವರಣೆಯನ್ನು ಸೇರಿಸತಕ್ಕದ್ದು.

1.4.2. ಮುನ್ಸಿಪಲ್ ಕಮೀಷನರು/ಪೌರಾಯುಕ್ತರು ನೀಡಿದ ವಿವರಣೆಯನ್ನು ಲೆಕ್ಕಪರಿಶೋಧಕರು ಅಂಗೀಕರಿಸಬಹುದು ಮತ್ತು ಆಕ್ಷೇಪಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು. ಆ ವಿಷಯವನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಥವಾ ಮುಂಚಿನ ದಿನದಂದು ಮರುತನಿಖೆ ಮಾಡಬೇಕೆಂದು ನಿರ್ದೇಶಿಸಬಹುದು. ವರದಿಯಲ್ಲಿ ತೋರಿಸಿದ ದೋಷಗಳು ಅಥವಾ ಕ್ರಮದೋಷಗಳು (Defects or Irregularities) ಅಥವಾ ಅವುಗಳಲ್ಲಿ ಯಾವುದನ್ನೂ ಪರಿಹರಿಸಿಲ್ಲವೆಂದು ತೀರ್ಮಾನಿಸಬಹುದು.

1.4.3. ಲೆಕ್ಕಪರಿಶೋಧಕರು ಕಾರ್ಯವಿಧಾನದಲ್ಲಿನ ಲೋಪಗಳನ್ನು (Procedural Lapses) ಯಾವ ವಿಧಾನದಿಂದ ಸರಿಪಡಿಸಬಹುದು ಮತ್ತು ಸರಿಪಡಿಸಲಾಗದಿದ್ದರೆ ಯಾವ ಪ್ರಾಧೀಕಾರದ ಅನುಮೋದನೆಯಿಂದ ಅವುಗಳನ್ನು ಸರಿಪಡಿಸಬಹುದು ಎಂಬುದನ್ನು ವರದಿಯಲ್ಲಿ ಹೇಳಬಹುದು. ಆರ್ಥಿಕ ನಷ್ಟ ಕಂಡುಬಂದಲ್ಲಿ ಅಂತಹ ನಷ್ಟವನ್ನು ಸರಿದೂಗಿಸುವ ಬಗ್ಗೆ ಸಂಬಂಧಿಸಿದವರ ಮೇಲೆ ಭಾರ (Charge) ಅಥವಾ ಅಧಿಭಾರ (Surcharge) ಹೊರಿಸುವ ಬಗ್ಗೆ ಸಹ ಅಭಿಪ್ರಾಯ ವ್ಯಕ್ತಪಡಿಸಬಹುದು.

1.4.4. ಯಾವುದೇ ಪ್ರಕರಣದಲ್ಲಿ ಅಪರಾಧಿಕ ದುರ್ವಿನಿಯೋಗದ ಅಥವಾ ಮೋಸದ ಪೂರ್ವ ಭಾವನೆಯನ್ನು ಬೆಂಬಲಿಸುವುದೆಂದು ಲೆಕ್ಕಪರಿಶೋಧಕರಿಗೆ ಕಂಡು ಬಂದರೆ ಅಥವಾ ಅವರ ಅಭಿಪ್ರಾಯದಲ್ಲಿ ವಿಶೇಷ ಗಮನ ಅಥವಾ ತಕ್ಷಣದ ತನಿಖೆ ಅಗತ್ಯವೆನಿಸಿದರೆ ಅದನ್ನು ಪೌರಾಡಳಿತ ನಿರ್ದೇಶನಾಲಯದ ಗಮನಕ್ಕೆ ತರಬಹುದಾಗಿದೆ.

1.4.5. ರಾಜ್ಯ ಲೆಕ್ಕಪತ್ರ ಇಲಾಖೆಯ, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರು ನಗರ ಸ್ಥಳೀಯ ಸಂಸ್ಥೆಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರಾಗಿದ್ದಾರೆ. ಮುನಿಸಿಪಾಲಿಟಿಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು, ರಾಜ್ಯ ಲೆಕ್ಕಪತ್ರ ಇಲಾಖೆಯ ವರದಿಯಲ್ಲಿ ಗಮನಿಸಲಾದ ಯಾವುದೇ ನ್ಯೂನತೆ ಅಥವಾ ಅಕ್ರಮಗಳನ್ನು ಸರಿಪಡಿಸುವುದಕ್ಕೆ ಜವಾಬ್ದಾರರಾಗಿರುತ್ತಾರೆ. ಕಾನೂನು ಬಾಹಿರ ಪಾವತಿ ಅಥವಾ ಉಂಟು ಮಾಡಿದ ನಷ್ಟಕ್ಕೆ ಸಂಬಂಧಪಟ್ಟವರನ್ನು ದಂಡನೆಗೆ ಗುರಿ ಮಾಡಲು ನಿರ್ದೇಶಕರು, ಪೌರಾಡಳಿತ ಇಲಾಖೆ, ಇವರು ಅಧಿಕಾರವನ್ನು ಹೊಂದಿರುತ್ತಾರೆ.

## ಅಧ್ಯಾಯ-2

## ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ಥೂಲನೋಟ

### 2.1 ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳು.

ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ವಂತ ಮೂಲಗಳಿಂದ ಬರುವ ಸ್ವೀಕೃತಿಗಳು, ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದಿಂದ ಸ್ವೀಕೃತವಾಗುವ ಅನುದಾನ ಮತ್ತು ಧನ ಸಹಾಯ ಹಾಗೂ ರಾಜ್ಯ ಸರ್ಕಾರ ಅನುಮೋದಿಸುವ ಹಣಕಾಸು ಸಂಸ್ಥೆಗಳಿಂದ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲಗಳು, ಖಾಲಿ ನಿವೇಶನ ಮತ್ತು ಕಟ್ಟಡಗಳ ಮೇಲಿನ ಆಸ್ತಿ ತೆರಿಗೆ ಮತ್ತು ಇತರೆ ಶುಲ್ಕಗಳು ನಗರ ಸ್ಥಳೀಯ ಸಂಸ್ಥೆಯ ಆದಾಯದ ಸಂಪನ್ಮೂಲಗಳಾಗಿವೆ. ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವು ನಗರ ಸ್ಥಳೀಯ ಸಂಸ್ಥೆಯಲ್ಲಿದ್ದಾಗ್ಯೂ, ದರ ಮತ್ತು ದರ ಪರಿಷ್ಕರಣೆ, ಸಂಗ್ರಹಿಸುವ ಕ್ರಮ, ನಿರ್ಧರಣೆಯ ರೀತಿ, ವಿನಾಯಿತಿಗಳು, ರಿಯಾಯಿತಿಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಅಧಿಕಾರ ಹೊಂದಿದೆ. ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ತೆರಿಗೆಯೇತರ ರಾಜಸ್ವವು, ಬಾಡಿಗೆ, ನಕ್ಷೆ ಅನುಮೋದನಾ ಶುಲ್ಕ, ನೀರಿನ ಕರಗಳು ಮುಂತಾದ ಶುಲ್ಕವನ್ನೊಳಗೊಂಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ ಮತ್ತು ನೆರವು ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತು ವಿವಿಧ ಯೋಜನೆಗಳ ಜಾರಿಗೊಳಿಸುವಿಕೆಗಾಗಿ ವಿನಿಯೋಗಿಸಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಬರುವ ಕ್ರೋಢೀಕೃತ ಸಂಪನ್ಮೂಲಗಳ/ ಹಣಕಾಸುಗಳ ಹರಿವಿನ ನಕ್ಷೆ ಕೆಳಗಿನಂತಿದೆ.



## 2.2 ನಗರ ಸ್ಥಳೀಯ ಸಂಸ್ಥೆಗಳ ನಿಧಿ.

ರಾಜ್ಯ ಸರ್ಕಾರದಿಂದ ಸ್ವೀಕೃತವಾದ ಅನುದಾನವನ್ನು ಖಜಾನೆಯಲ್ಲಿ ನಗರ ಸ್ಥಳೀಯ ಸಂಸ್ಥೆಯ ವೈಯಕ್ತಿಕ ಠೇವಣಿ ಖಾತೆಯಲ್ಲಿಡಲಾಗುತ್ತದೆ. ಎಲ್ಲಾ ಸ್ವೀಕೃತಿಗಳನ್ನು ಖಜಾನೆಯಲ್ಲಿ ಜಮೆಮಾಡಬೇಕು ಮತ್ತು ಬಟವಾಡೆಗೆ ಬೇಕಾಗುವ ಹಣವನ್ನು ಖಜಾನೆಯಿಂದ ಚೆಕ್ಕುಗಳ ಮೂಲಕ ಪಡೆಯಬೇಕು. ಯೋಜನೆಗಳ ಅನುಷ್ಠಾನಕ್ಕಾಗಿ ಸ್ವೀಕೃತವಾದ ಅನುದಾನವನ್ನು ರಾಜ್ಯ ಸರ್ಕಾರದಿಂದ ಅಧಿಕೃತಗೊಳಿಸಲಾದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಡಲಾಗುತ್ತದೆ.

## 2.3 ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯ.

ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ

1) ತೆರಿಗೆ ಆದಾಯ.
2) ತೆರಿಗೆಯೇತರ ಆದಾಯ.

**ತೆರಿಗೆ ಆದಾಯ.**

ತೆರಿಗೆ ಆದಾಯದಲ್ಲಿ ಆಸ್ತಿ ತೆರಿಗೆ, ಸ್ವಯಂ ಘೋಷಿತ ಆಸ್ತಿ ತೆರಿಗೆ, ಜಾಹೀರಾತು ತೆರಿಗೆ ಹಾಗೂ ಇತರ ತೆರಿಗೆಗಳು ಒಳಗೊಂಡಿರುತ್ತವೆ.

**ತೆರಿಗೆಯೇತರ ಆದಾಯ.**

ತೆರಿಗೆಯೇತರ ಆದಾಯದಲ್ಲಿ ನೀರಿನ ದರಗಳು, ಬಾಡಿಗೆ, ಶುಲ್ಕಗಳು ಹಾಗೂ ಇತರೆ ಒಳಗೊಂಡಿರುತ್ತವೆ.

2009–10ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಗಳ ತೆರಿಗೆ ಮತ್ತು ತೆರಿಗೆಯೇತರ ಆದಾಯದ ವಿವರಗಳು ಈ ಕೆಳಕಂಡಂತಿವೆ.

**ತೆರಿಗೆ ಆದಾಯ.**

(₹. ಲಕ್ಷಗಳಲ್ಲಿ)

| | ದಿ:1–4–2009 ರ ಪ್ರಾರಂಭಿಕ ಶಿಲ್ಕು | ಬೇಡಿಕೆ | ಒಟ್ಟು ಬೇಡಿಕೆ | ವಸೂಲಿ | ದಿ:31–3–2010 ರ ಬಾಕಿ ಶುಲ್ಕ |
|---|---|---|---|---|---|
| ಆಸ್ತಿ ತೆರಿಗೆ | 5639.60 | 9019.80 | 14659.40 | 9191.96 | 5467.44 |
| ಇತರೆ ತೆರಿಗೆ | 669.90 | 3629.17 | 4299.07 | 3560.59 | 738.48 |
| **ಒಟ್ಟು ತೆರಿಗೆ** | **6309.50** | **12648.97** | **18958.47** | **12752.55** | **6205.92** |

### ತೆರಿಗೆಯೇತರ ಆದಾಯ.

(₹.ಲಕ್ಷಗಳಲ್ಲಿ)

| ವಿವರ | ದಿ:1-4-2009 ರ ಪ್ರಾರಂಭಿಕ ಶಿಲ್ಕು | ಬೇಡಿಕೆ | ಒಟ್ಟು ಬೇಡಿಕೆ | ವಸೂಲಿ | ದಿ:31-3-2010 ರ ಬಾಕಿ ಶುಲ್ಕ |
|---|---|---|---|---|---|
| ನೀರಿನ ಕರ | 8268.16 | .7427.81 | 15695.97 | 6873.51 | 8822.46 |
| ಬಾಡಿಗೆ | 3062.37 | 2272.68 | 5335.05 | 2347.62 | 2987.43 |
| ಶುಲ್ಕಗಳು | 1131.42 | 468.23 | 1599.65 | 496.55 | 1103.10 |
| ಇತರೆ | 669.90 | 3629.17 | 4299.07 | 3560.59 | 738.48 |
| ಒಟ್ಟು | **13131.85** | **13797.89** | **26929.74** | **13278.27** | **13651.47** |

## 2.4 ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಅನುಷ್ಠಾನ

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ ಕಲಂ 95, 96 ಮತ್ತು 97 ರನ್ವಯ ಜಾರಿಯಲ್ಲಿದ್ದ ಆಸ್ತಿ ತೆರಿಗೆ ಪದ್ಧತಿಯ ಬದಲಾಗಿ ದಿ:01-04-2002 ರಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಮಾರ್ಗಸೂಚಿಗಳ ಕಂಡಿಕೆ 37 ಮತ್ತು 38ರಲ್ಲಿ ಆಸ್ತಿ ತೆರಿಗೆ ವಸೂಲಾತಿಗೆ ಸಂಬಂಧಿಸಿದಂತೆ ಮುನಿಸಿಪಲ್ ಅಧಿಕಾರಿಗಳ ಕರ್ತವ್ಯಗಳ ಬಗ್ಗೆ ವಿವರಿಸಲಾಗಿದೆ. ಈ ಮಾರ್ಗಸೂಚಿಗಳನ್ವಯ ಆಸ್ತಿಗಳ ಮಾಲೀಕರು ಆಸ್ತಿ ತೆರಿಗೆ ಪಾವತಿಸಲು ಮತ್ತು ಘೋಷಣೆಯನ್ನು ಸಲ್ಲಿಸಲು ವಿಫಲರಾದಲ್ಲಿ ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿಗಳು ಅಥವಾ ಪ್ರಾಧೀಕೃತ ಅಧಿಕಾರಿಯು ಆಸ್ತಿ ತೆರಿಗೆಯನ್ನು ಮೌಲ್ಯಮಾಪನ ಮಾಡಿ, ಸಂಬಂಧಿಸಿದ ಆಸ್ತಿಯ ಮತ್ತು ಕಟ್ಟಡದ ತೆರಿಗೆಯನ್ನು ನಿರ್ಧರಿಸಬಹುದಾಗಿದೆ ಹಾಗೂ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಮತ್ತು ವಿಳಂಬವಾಗಿ ಪಾವತಿ ಮಾಡಿದವರ ಮೇಲೆ ಆಸ್ತಿ ತೆರಿಗೆ ಮೊತ್ತದ ಮೇಲೆ ಪ್ರತಿ ತಿಂಗಳಿಗೆ ಶೇ.2 ರಷ್ಟು ಬಡ್ಡಿ ವಿಧಿಸಬಹುದಾಗಿದೆ.

ಆಸ್ತಿ ತೆರಿಗೆ ಸಂದಾಯ ಮಾಡಲು ತಿಳುವಳಿಕೆ ಪತ್ರವನ್ನು ನೀಡಿದ ನಂತರವೂ ತೆರಿಗೆ ಪಾವತಿಸಲು ವಿಫಲರಾದಲ್ಲಿ, ಮುನಿಸಿಪಲ್ ಅಧಿಕಾರಿಯು, ಬಾಕಿದಾರರ ಮೇಲೆ ಪ್ರಥಮ ದರ್ಜೆ ಮ್ಯಾಜಿಸ್ಟೇಟರ್ ಮುಂದೆ ಫಿರ್ಯಾದು ಮಾಡಬಹುದು ಮತ್ತು ಮ್ಯಾಜಿಸ್ಟೇಟರು ಬಾಕಿ ಮೊತ್ತವನ್ನು ದಂಡ ಎಂದು ವಸೂಲು ಮಾಡಲು ಆದೇಶಿಸಬಹುದು.

ಆಸ್ತಿ ತೆರಿಗೆ ವಸೂಲಾತಿ ನಿಗಧಿಪಡಿಸುವ ಬಗ್ಗೆ ಕರ್ನಾಟಕ ಪೌರಸಭೆಗಳ ಲೆಕ್ಕಪದ್ಧತಿ ಮತ್ತು ಬಜೆಟ್ ನಿಯಮಗಳು, 2006ರ ನಿಯಮ 53ರ ಪ್ರಕಾರ ನಮೂನೆ ಕೆ.ಎಂ.ಎಫ್ 24 ರಲ್ಲಿ ಆಸ್ತಿ ತೆರಿಗೆಯ ಬೇಡಿಕೆ, ವಸೂಲಿ ಮತ್ತು ಬಾಕಿಯ ವಹಿಯನ್ನು ನಿರ್ವಹಿಸಬೇಕಾಗುತ್ತದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳು ವಿಫಲವಾಗಿರುವುದು ಕಂಡು ಬಂದಿದ್ದು, ಇದರಿಂದ ಅವುಗಳ ಹಣಕಾಸಿನ ಕ್ರೋಢೀಕರಣಕ್ಕೆ ಹಿನ್ನಡೆಯುಂಟಾಗಿರುತ್ತದೆ.

## 2.5 ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ.

2009-10 ನೇ ಸಾಲಿನಲ್ಲಿ ರಾಜ್ಯದಲ್ಲಿ 211 ನಗರ ಸ್ಥಳೀಯ ಸಂಸ್ಥೆಗಳಿದ್ದು ಸದರಿ ವರ್ಷದಲ್ಲಿ ಲೆಕ್ಕಪರಿಶೋಧನೆ ಮಾಡಿದ 189 ಸಂಸ್ಥೆಗಳ ಸ್ವೀಕೃತಿ ಮತ್ತು ವೆಚ್ಚದ ವಿವರಗಳು ಈ ಕೆಳಕಂಡಂತಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

(₹ಲಕ್ಷಗಳಲ್ಲಿ)

| ದಿ:1-4-2009 ರ ಪ್ರಾರಂಭಿಕ ಶಿಲ್ಕು | ಜಮೆಗಳು | ಒಟ್ಟು | ವೆಚ್ಚ | ದಿ:31-3-2010 ರ ಅಂತಿಮ ಶಿಲ್ಕು |
|---|---|---|---|---|
| 97,598.12 | 176842.82 | 274440.94 | 177757.31 | 96683.63 |

## 2.6 2009-10 ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಮೂಲಗಳಿಂದ ಬಂದಂತಹ ಜಮೆ ಹಾಗೂ ಆದಾಯದ ವಿವರಗಳು.

ಪ್ರಸಕ್ತ ಸಾಲಿನಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿನ ವಿವರಗಳಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಮೂಲಗಳಿಂದ ಅಂದರೆ ಸರ್ಕಾರದ ಅನುದಾನ, ಹಣಕಾಸು ಆಯೋಗದ ಅನುದಾನಗಳು ಹಾಗೂ ಸ್ವಂತ ಮೂಲಗಳಿಂದ ಆದ ಜಮೆ ಮತ್ತು ಆದಾಯಗಳ ಶೀರ್ಷಿಕೆವಾರು ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.

## 2.7 2009-10 ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಶೀರ್ಷಿಕೆಗಳಲ್ಲಿ ಭರಿಸಲಾದ ವೆಚ್ಚದ ವಿವರಗಳು.

2009-10 ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿನ ವಿವರಗಳಂತೆ ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಶೀರ್ಷಿಕೆಗಳಡಿಯಲ್ಲಿ ಭರಿಸಲಾದ ವೆಚ್ಚದ ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ.

## ಅಧ್ಯಾಯ –3

## ಲೆಕ್ಕಪರಿಶೋಧನಾ ಫಲಿತಾಂಶಗಳು

### 3.1 ಜಿಲ್ಲಾ ಮಟ್ಟದ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಯ ಸಹಾಯಕ ನಿಯಂತ್ರಕರಿಂದ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಗಳ ಬಿಡುಗಡೆ.

2009–10ನೇ ಸಾಲಿನಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರುಗಳು ರಾಜ್ಯದಲ್ಲಿರುವ 211 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 189 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಕೈಗೊಂಡು ಲೆಕ್ಕಪರಿಶೋಧನಾ ವರದಿಗಳನ್ನು ಬಿಡುಗಡೆ ಮಾಡಿರುತ್ತಾರೆ. ಸಂಬಂಧಿಸಿದ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಸದರಿ ವರದಿಗಳಲ್ಲಿ ದಾಖಲಿಸಿರುವ ನ್ಯೂನತೆಗಳನ್ನು ಸರಿಪಡಿಸಿ ಅನುಸರಣಾ ವರದಿಯನ್ನು ನಿಗದಿತ ಸಮಯದೊಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿದ್ದರೂ ಕೆಲವು ನಗರ ಸ್ಥಳೀಯ ಸಂಸ್ಥೆಗಳಿಂದ ಮಾತ್ರ ಅನುಸರಣಾ ವರದಿಗಳು ಸ್ವೀಕೃತವಾಗಿದ್ದು, ಅವುಗಳೂ ಸಹ ಅಪೂರ್ಣವಾಗಿದ್ದು ಸಮರ್ಪಕವಾಗಿರುವುದಿಲ್ಲ. ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ಕಲಂ 295(1)ರ ಪ್ರಕಾರ ಅನುಸರಣಾ ವರದಿಯನ್ನು ನಿಗದಿತ ಸಮಯದಲ್ಲಿ ಸಲ್ಲಿಸಲು ಸಂಬಂಧಿಸಿದ ಪೌರಾಯುಕ್ತರು/ಮುಖ್ಯಾಧಿಕಾರಿಗಳು ವಿಫಲರಾಗಿರುವುದು ಕಂಡು ಬಂದಿರುತ್ತದೆ.

### 3.2 2009–10ನೇ ಸಾಲಿನ ಅಂತ್ಯಕ್ಕೆ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಸ್ತಾಪಿಸಿರುವ ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ಬಾಕಿ ಕಂಡಿಕೆಗಳನ್ನು ತೀರುವಳಿ ಮಾಡದೇ ಇರುವುದು.

ನಗರಸಭೆ, ಪುರಸಭೆ/ಪಟ್ಟಣ ಪಂಚಾಯತಿಗಳಲ್ಲಿ ಈ ಹಿಂದೆ ಲೆಕ್ಕ ಪರಿಶೋಧನೆ ಮಾಡಿ, ಕೆಲವೊಂದು ಕಂಡಿಕೆಗಳಲ್ಲಿ ನಿಯಮಗಳನ್ನು ಪಾಲಿಸದೆ/ಅಧಿಕಾರ ಹೊಂದದೆ ನಿರ್ಧರಿಸಿದ ವಿಷಯಗಳಿಗೆ ಸಂಬಂದಿಸಿದಂತೆ ಕೆಲವು ಮೊತ್ತಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಕೆಲವೊಂದು ಕಂಡಿಕೆಗಳಲ್ಲಿ ನಿಯಮಗಳಿಗೆ ಹೊರತಾಗಿ ನಿರ್ಣಯ ಹೊರಡಿಸಿರುವುದಕ್ಕೆ/ವಸೂಲಾದ ಮೊತ್ತವನ್ನು ಜಮಾ ಮಾಡದಿರುವ ಬಗ್ಗೆ/ಕಡಿಮೆ ವಸೂಲಿ ಮಾಡಿರುವ ಬಗ್ಗೆ/ಹೆಚ್ಚಿಗೆ ಪಾವತಿ ಮಾಡಿರುವ ಬಗ್ಗೆ, ಇತರೇ ವಿಷಯಗಳಿಗೆ ಸಂಬಂದಿಸಿದಂತೆ, ಸಂಬಂಧಪಟ್ಟವರಿಂದ ವಸೂಲಿ ಮಾಡಲು ಸೂಚಿಸಿದೆ. ಆದರೆ ಹೆಚ್ಚಿನ ಸಂಸ್ಥೆಗಳು ಈ ರೀತಿ ಸೂಚಿಸಲಾದ ಕಂಡಿಕೆಗಳಿಗೆ ಸೂಕ್ತ ಕ್ರಮ ಜರುಗಿಸದೆ ಹಲವಾರು ವರ್ಷಗಳಿಂದಲೂ ಹಾಗೆಯೇ ಮುಂದುವರೆಸಿಕೊಂಡು ಬರಲಾಗುತ್ತಿದೆ. ಆದ್ದರಿಂದ ಹಿಂದಿನ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಕಂಡಿಕೆಗಳ ಬಗ್ಗೆ ಸದರಿ ಕಂಡಿಕೆಗಳಲ್ಲಿ ಹೇಳಿರುವಂತೆ ಸೂಕ್ತ ಕ್ರಮ ಜರುಗಿಸುವ ಅವಶ್ಯಕತೆ ಇರುತ್ತದೆ. ವಿವರಗಳನ್ನು ಅನುಬಂಧ–4ರಲ್ಲಿ ಲಗತ್ತಿಸಲಾಗಿದೆ.

(₹.ಲಕ್ಷಗಳಲ್ಲಿ)

| ಪ್ರಾರಂಭಿಕಶಿಲ್ಕು | | | 2009-10ನೇ ಸಾಲಿನ ಸೇರ್ಪಡೆ | | | ಒಟ್ಟು | | |
|---|---|---|---|---|---|---|---|---|
| ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆಯಲ್ಲಿ ಇಟ್ಟಿರುವುದು | ವಸೂಲಾತಿಗೆ ಸೂಚಿಸಿರುವುದು | ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆಯಲ್ಲಿ ಇಟ್ಟಿರುವುದು | ವಸೂಲಾತಿಗೆ ಸೂಚಿಸಿರುವುದು | ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆಯಲ್ಲಿ ಇಟ್ಟಿರುವುದು | ವಸೂಲಾತಿಗೆ ಸೂಚಿಸಿರುವುದು |
| 1 | 2 | 3 | 1 | 2 | 3 | 1 | 2 | 3 |
| 159909 | 95177.27 | 14266.48 | 4304 | 18134.76 | 6761.05 | 164213 | 113312.03 | 21027.53 |

| ತೀರುವಳಿ | | | ಬಾಕಿ 31-03-2010 | | |
|---|---|---|---|---|---|
| ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆಯಲ್ಲಿ ಇಟ್ಟಿರುವುದು | ವಸೂಲಾತಿಗೆ ಸೂಚಿಸಿರುವುದು | ಕಂಡಿಕೆಗಳ ಸಂಖ್ಯೆ | ಆಕ್ಷೇಪಣೆಯಲ್ಲಿ ಇಟ್ಟಿರುವುದು | ವಸೂಲಾತಿಗೆ ಸೂಚಿಸಿರುವುದು |
| 1 | 2 | 3 | 1 | 2 | 3 |
| 2243 | 480.14 | 189.68 | 161970 | 112831.89 | 20837.85 |

## 3.3 ಕಾಮಗಾರಿ ಬಿಲ್ಲುಗಳು ಹಾಗೂ ಇತರೆ ವೆಚ್ಚಗಳ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ಇರುವ ಕುರಿತು:

ಕರ್ನಾಟಕ ಮುನಿಸಿಪಾಲಿಟಿಗಳ ಲೆಕ್ಕ ಪದ್ಧತಿ ಮತ್ತು ಬಜೆಟ್ ನಿಯಮಗಳು 2006 ನಿಯಮ 37 ಪ್ರಕಾರ ಪ್ರತಿಯೊಂದು ವೆಚ್ಚವನ್ನು ಕ್ರಮಬದ್ಧವಾಗಿ ತಯಾರಿಸಿದ ಬಿಲ್ಲುಗಳ ಆಧಾರದ ಮೇಲೆ ಪಾವತಿಮಾಡಬೇಕಾಗಿರುತ್ತದೆ. ಹಾಗೂ ಬಿಲ್ಲುಗಳನ್ನು ಪಾವತಿಸುವ ಮೊದಲು ಪರಿಶೀಲಿಸಿ ಧೃಢೀಕರಿಸಬೇಕಾಗಿರುತ್ತದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳ 2009-10ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳ ಪ್ರಕಾರ 04 ನಗರಸಭೆಗಳ ಪಾವತಿ **₹.313.79**ಲಕ್ಷ, 14 ಪುರಸಭೆಗಳ ಮೊತ್ತ **₹.504.05**ಲಕ್ಷ ಹಾಗೂ 11 ಪಟ್ಟಣ ಪಂಚಾಯಿತಿಗಳ ಮೊತ್ತ **₹.105.42** ಲಕ್ಷ ಸೇರಿ ಒಟ್ಟು **₹.923.26**ಲಕ್ಷ ಮೊತ್ತದ ಓಚರುಗಳನ್ನು ಹಾಜರುಪಡಿಸದೆ ಇರುವ ಕಾರಣ ಆಕ್ಷೇಪಣೆ/ವಸೂಲಾತಿಯಲ್ಲಿಟ್ಟಿದ್ದು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 ಕಲಂ 291 ಪ್ರಕಾರ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಗೆ ಕೇಳಲಾಗಿರುವ ವೋಚರ್ (ದಾಖಲಾತಿಗಳು ಹಾಗೂ ಮಾಹಿತಿಗಳು) ಹಾಜರು ಪಡಿಸಲು ವಿಫಲರಾಗಿರುತ್ತಾರೆ.

ಲೆಕ್ಕ ಪರಿಶೋಧನೆಗೆ ವೋಚರುಗಳನ್ನು ಹಾಜರು ಪಡಿಸದಿರುವ ನಗರ ಸ್ಥಳೀಯ ಸಂಸ್ಥೆಗಳ ವಿವರಣಾ ಪಟ್ಟಿಯನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

## 3.4 ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಜಿಲ್ಲಾ ನಿರ್ಮಿತಿ ಕೇಂದ್ರಗಳಿಗೆ ಮುಂಗಡ ಹಣ ಪಾವತಿಸಿರುವುದು:

ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 281 ಆಕೋ-3/08 ದಿನಾಂಕ:04-07-2008 ರಲ್ಲಿ ಸರ್ಕಾರದ ವಿವಿಧ ಇಲಾಖೆಯ ಕಾಮಗಾರಿಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪರಿಸರಸ್ನೇಹಿ (environment friendly) ಕಡಿಮೆ ವೆಚ್ಚದ ಕಟ್ಟಡ ನಿರ್ಮಾಣ ತಂತ್ರಜ್ಞಾನ (low cost building technology) ಅಥವಾ ನವೀನ ಕಟ್ಟಡ ನಿರ್ಮಾಣ ಸಾಮಗ್ರಿಗಳು (innovative building construction materials) ಅಥವಾ ಮೊದಲೇ ಅಚ್ಚು ಹಾಕಿದ ತಂತ್ರಜ್ಞಾನ (Pre-cast

technology) ಅಳವಡಿಸಿರುವಂತಹ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರದ (KARNIK) ಅನುಮೋದನೆ ಪಡೆದು ನಿರ್ಮಿತಿ ಕೇಂದ್ರಕ್ಕೆ ಈ ಕಾಮಗಾರಿಗಳನ್ನು ನೇರವಾಗಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಲ್ಲಿ ವಿನಾಯಿತಿ ನೀಡಿದೆ. ಸರ್ಕಾರದ ಆದೇಶ ಸಂಖ್ಯೆ:ನಅಇ/42/ಎಸ್‌ಎಸ್‌ಸಿ/2008, ದಿ:25-9-2008ರಲ್ಲಿ ನಗರ ಸ್ಥಳೀಯ ಸಂಸ್ಥೆಯ, ನಿರ್ಣಯಗಳ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ಕಾಮಗಾರಿಗಳನ್ನು ಮೇಲ್ಕಂಡ ಇಲಾಖೆಗಳ ಮುಖಾಂತರ ನಿರ್ವಹಿಸಲು ಅನುದಾನ ಬಿಡುಗಡೆ ಮಾಡಲು ಮತ್ತು ಸಾಧ್ಯವಾದಷ್ಟು ಸ್ಥಳೀಯ ಸಂಸ್ಥೆಗಳಿಗೆ ಸಮೀಪವಿರುವ ಇಲಾಖೆ/ಸಂಸ್ಥೆಗಳಿಗೆ ಕಾಮಗಾರಿಗಳನ್ನು ವಹಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂ.ನಅಇ/37/ಎಸ್.ಎಫ್.ಸಿ/ 2008/21-8-2008 ರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಮಾತ್ರ ಸದರಿ ಇಲಾಖೆ/ಸಂಸ್ಥೆಗಳಿಗೆ ವಹಿಸತಕ್ಕದ್ದು ಎಂದು ಷರತ್ತು ಇರುತ್ತದೆ.

ಆದರೆ ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಜಿಲ್ಲಾ ನಿರ್ಮಿತಿ ಕೇಂದ್ರಗಳಿಗೆ ಇಂತಹ ಕಾಮಗಾರಿಗಳನ್ನು ವಹಿಸುವಾಗ ಟೆಂಡರ್ ಪ್ರಕ್ರಿಯೆ ಹೊರತುಪಡಿಸಿ ಉಳಿದ ಪ್ರಕ್ರಿಯೆಗಳಾದ, ರಾಜ್ಯ ನಿರ್ಮಾಣ ಕೇಂದ್ರದ (KARNIK) ಅನುಮೋದನೆ, ಕಾಮಗಾರಿ ಅಂದಾಜು ಪಟ್ಟಿಗಳ ತಯಾರಿಕೆ, ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ, ಕಾಮಗಾರಿ ನಿರ್ವಹಿಸಲು ಮಾಡಿಕೊಳ್ಳ ಬೇಕಾದ ಒಪ್ಪಂದ ಪತ್ರ, ಕಾಮಗಾರಿ ನಿರ್ವಹಣೆಯಲ್ಲಿ ದಾಖಲಿಸಲು ಅವಶ್ಯ ಇರುವ ಅಳತೆ ಪುಸ್ತಕ, ಕಾಮಗಾರಿ ಬಿಲ್ಲುಗಳು ಮತ್ತು ಕಾಮಗಾರಿ ಮುಕ್ತಾಯ ಧೃಡೀಕರಣ ಪತ್ರ ಇತ್ಯಾದಿ ಅವಶ್ಯಕವಾದ ದಾಖಲೆಗಳನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸದೆ ನೇರವಾಗಿ ನಿರ್ಮಿತಿ ಕೇಂದ್ರಗಳಿಗೆ ಮುಂಗಡ ಹಣದ ಮೊತ್ತ ₹.340.90 ಲಕ್ಷಗಳನ್ನು ಪಾವತಿಸಿರುವುದು ಕಂಡು ಬಂದಿದೆ.

(₹.ಲಕ್ಷಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಗಳ ಹೆಸರು | ಮುಂಗಡ ಪಾವತಿಸಿದ ಮೊತ್ತ |
|---|---|---|---|
| 1 | ಯಾದಗಿರಿ | ನಗರಸಭೆ, ಯಾದಗಿರಿ | 100.00 |
| 2 | ದಾವಣಗೆರೆ | ನಗರಸಭೆ, ಹರಿಹರ | 40.00 |
| 3 | ಚಿತ್ರದುರ್ಗ | ಪಟ್ಟಣ ಪಂಚಾಯಿತಿ, ಮೊಳಕಾಲ್ಮೂರು | 182.77 |
| 4 | ಹಾವೇರಿ | ಪಟ್ಟಣ ಪಂಚಾಯಿತಿ, ಬಂಕಾಪುರ | 18.13 |
| | | ಒಟ್ಟು | **340.90** |

ಮೇಲ್ಕಂಡ ನಗರ ಸ್ಥಳೀಯ ಸಂಸ್ಥೆಗಳಿಂದ ನಿರ್ಮಿತಿ ಕೇಂದ್ರಗಳಿಗೆ ಸರ್ಕಾರದ ಆದೇಶಗಳಿಗೆ ಹೊರತಾಗಿ ಒಟ್ಟು ₹.340.90 ಲಕ್ಷಗಳ ಮುಂಗಡ ಮೊತ್ತಗಳನ್ನು ಪಾವತಿ ಮಾಡಲಾಗಿದೆ. ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದಕ್ಕೆ ಪೂರಕವಾದ ಅಗತ್ಯವಿರುವ ದಾಖಲೆಗಳು ಲಭ್ಯವಿಲ್ಲದ ಕಾರಣ ಮುಂಗಡಗಳ ಸದ್ಬಳಕೆ ಕುರಿತು ಲೆಕ್ಕಪರಿಶೋಧನೆಯಲ್ಲಿ ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

## 3.5 ಚಳ್ಳಕೆರೆ ಪುರಸಭೆಯಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಯಲ್ಲಿ ನಿಯಮಗಳಿಗೆ ಹೊರತಾಗಿ ₹.3.50 ಲಕ್ಷಗಳನ್ನು ಪಾವತಿ ಮಾಡಿರುವ ಕುರಿತು.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಪುರಸಭೆಯ 2009-10ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 40ರಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಯಲ್ಲಿ ಟೆಂಡರ್ ಕರೆಯದೇ ನಿಯಮ ಬಾಹಿರವಾಗಿ ನಿರ್ವಹಿಸಿರುವುದು ಕಂಡುಬಂದಿದೆ. ಮುಖ್ಯಾಧಿಕಾರಿ ಚಳ್ಳಕೆರೆ ಪುರಸಭೆ ಇವರು ನಿಯಮ ಪಾಲಿಸದೆ ಕುಡಿಯುವ ನೀರು ಸರಬರಾಜು (ಟ್ಯಾಂಕ್ ಮೂಲಕ) ಕಾಮಗಾರಿ ನಿರ್ವಹಿಸಿ ಟೆಂಡರ್ ಮೊತ್ತಕ್ಕಿಂತ ಹೆಚ್ಚಿನ ದರ ₹.3.50 ಲಕ್ಷಗಳನ್ನು ಪಾವತಿ ಮಾಡಿರುವ ಪ್ರಕರಣ ಕಂಡುಬಂದಿದ್ದು ವಿವರಗಳು ಈ ಕೆಳಕಂಡಂತಿದೆ.

ನೀರಿನ ನಿಧಿ ಖಾತೆ (ಖಾತೆ ನಂ. 54036183264) ರಲ್ಲಿ ನೀರು ಸರಬರಾಜು ಪಾವತಿಗೆ ಸಂಬಂಧಿಸಿದ ಕಡತ ಪರಿಶೀಲಿಸಲಾಗಿ ಮುಖ್ಯಾಧಿಕಾರಿಯವರು ಚಳ್ಳಕೆರೆ ಪಟ್ಟಣದಲ್ಲಿ ದಿ:13/03/2007 ರಿಂದ 22/05/2007 ವರೆಗೆ ಮೂರು ಏಜೆನ್ಸಿಗಳು (ಯಾಸ್ಮೀನ್ ರೋಡ್ ಲೈನ್ಸ್, ಜಯಲಕ್ಷ್ಮೀ ಟ್ರಾನ್ಸ್‌ಫೋರ್ಟ್ ಹಾಗೂ ವೀರೇಶ್ ವಾಟರ್ ಸಪ್ಲೆ) ಟ್ಯಾಂಕರ್ ಮೂಲಕ ಒಟ್ಟು 3041 ಟ್ರಿಪ್ ಕುಡಿಯುವ ನೀರು ಸರಬರಾಜು ಮಾಡಿದ್ದು ಒಂದು ಟ್ರಿಪ್ಪಿಗೆ ₹.220 ರಂತೆ ಒಟ್ಟು ₹.669020 ಗಳಾಗಿದ್ದು ಸದರಿ ಮೊಬಲಗನ್ನು ಬರ ಪರಿಹಾರ ನಿಧಿಯಿಂದ ಪಾವತಿಸಲು ಅನುದಾನ ಬಿಡುಗಡೆಗಾಗಿ ಜಿಲ್ಲಾಧಿಕಾರಿಯವರಿಗೆ ಪತ್ರ ಸಂ: ತಾಂತ್ರಿಕ CR 71/06-07, ದಿ:06-11-2008ರಲ್ಲಿ ಕೋರಿರುತ್ತಾರೆ. ನೀರು ಸರಬರಾಜಿಗೆ ಸಂಬಂಧಿಸಿದಂತೆ ಟೆಂಡರ್ ಕರೆಯದಿರುವುದು ಹಾಗೂ ಹಿಂದಿನ ಶಾಸಕರು ಉದಾರದಿಂದ ದಾನವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಿರುವುದು, ದಿನಪತ್ರಿಕೆಯಲ್ಲಿ ಪ್ರಕಟಣೆಯಾಗಿರುವ ಕಾರಣ, ಸದರಿ ಮೊತ್ತ ನೀಡಲು ಬರುವುದಿಲ್ಲ, ಎಂದು ಜಿಲ್ಲಾಧಿಕಾರಿಯವರು ಪತ್ರ ಸಂಖ್ಯೆ:ಜಿನಕೋ/ಕುನೀ/ಸಿ.ಆರ್02/06-07, ದಿ:19/11/2008ರಲ್ಲಿ ಮುಖ್ಯಾಧಿಕಾರಿಯವರಿಗೆ ತಿಳಿಸಿರುತ್ತಾರೆ.

ಆದರೆ ಮುಖ್ಯಾಧಿಕಾರಿಯವರು ₹.6.69 ಲಕ್ಷಗಳಲ್ಲಿ ₹.3.50 ಲಕ್ಷಗಳನ್ನು 2009-10ನೇ ಸಾಲಿನಲ್ಲಿ ಮುನಿಸಿಪಲ್‌ಕೌನ್ಸಿಲ್ ತೀರ್ಮಾನದ ಮೇರೆಗೆ ಮೇಲ್ಕಂಡ ಏಜೆನ್ಸಿಗಳಿಗೆ ನೀರಿನ ನಿಧಿಯಿಂದ (ಖಾತೆ ನಂ. 54036183264) ಪಾವತಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ನಿಯಮಗಳಿಗೆ ಬಾಹಿರವಾಗಿ ಮೊತ್ತ ₹.3.50 ಲಕ್ಷಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.

## 3.6 ಕೊಟೇಷನ್‌ನಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚಿಗೆ ಹಣ ಪಾವತಿಸಿರುವುದು.

2009-10ನೇ ಸಾಲಿನ ನಗರ ಸ್ಥಳೀಯ ಸಂಸ್ಥೆಯಾದ ಬೆಳಗಾವಿ ಜಿಲ್ಲೆ ನಿಪ್ಪಾಣಿ ನಗರಸಭೆಯ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 62 ಪ್ರಕಾರ ಎಸ್.ಎಫ್.ಸಿ. ಅನುದಾನದಡಿ ಅಮಟೆಗಲ್ಲಿಯ 'ವಿ' ಮಾದರಿ ಗಟಾರ ನಿರ್ಮಾಣದ ಕಾಮಗಾರಿಯನ್ನು ಕೊಟೇಷನ್ ಆಧಾರದ ಮೇಲೆ ಶ್ರೀ.ಎಸ್.ವಿ. ಶಹಾ ಇವರಿಗೆ ಗುತ್ತಿಗೆ ವಹಿಸಿಕೊಡಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ₹.97,000/- ಹಾಗೂ ಅನುಮೋದಿತ ಕೊಟೇಷನ್ ಮೊತ್ತ ₹.1,03,928/-ಗಳಾಗಿರುತ್ತವೆ.

ಕಾಮಗಾರಿಯ ಮೊದಲ ಹಾಗೂ ಅಂತಿಮ ಬಿಲ್ಲನ್ನು ಪರಿಶೀಲಿಸಲಾಗಿ, (ಚೆಕ್ ಸಂ: 160531 ದಿ:16-11-2009) ₹.2,26,755/-ಗಳಿಗೆ ಬಿಲ್ಲುಗಳನ್ನು ಒಪ್ಪಿಕೊಂಡು ಪಾವತಿಸಲಾಗಿದೆ. ಇದರಿಂದಾಗಿ ಸದರಿ ಕಾಮಗಾರಿಗೆ ₹.1,22,827/- ಗಳನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿದೆ. ಪಿ.ಡಬ್ಲ್ಯೂಡಿ 'ಡಿ' ಕೋಡ್ 259ರ ಪ್ರಕಾರ ಒಂದು ವೇಳೆ ಅವಶ್ಯಕತೆಗನುಗುಣವಾಗಿ ಹೆಚ್ಚಿನ ಪ್ರಮಾಣದ ಕಾಮಗಾರಿ ನಿರ್ವಹಿಸಬೇಕಾದಲ್ಲಿ, ಪರಿಷ್ಕೃತ ಅಂದಾಜು ಪತ್ರಿಕೆ ತಯಾರಿಸಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದ ನಂತರ ಮೂಲ ಗುತ್ತಿಗೆದಾರರಿಂದ ಮೂಲ ಕೊಟೇಷನ್ ದರಗಳ ಪ್ರಕಾರ ಕಾರ್ಯನಿರ್ವಹಿಸಲು ಒಪ್ಪಿಗೆ ಪತ್ರ ಪಡೆಯಬೇಕು. ಈ ಪ್ರಕರಣದಲ್ಲಿ ವಿವರಣೆ ಕೇಳಲಾಗಿ ಅನುಮೋದಿತ ಪರಿಷ್ಕೃತ ಅಂದಾಜು ಪತ್ರಿಕೆ ಹಾಗೂ ಗುತ್ತಿಗೆದಾರಿಂದ ಒಪ್ಪಿಗೆ ಪತ್ರ ಹಾಜರು ಪಡಿಸಿರುವುದಿಲ್ಲ. ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸದೆ, ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಹೆಚ್ಚುವರಿ ಕಾಮಗಾರಿ ನಿರ್ವಹಿಸಿ ಹೆಚ್ಚಿನ ಮೊತ್ತ ಪಾವತಿಸಲಾಗಿರುತ್ತದೆ.

## 3.7 ಟೆಂಡರ್ ದಾಖಲಾತಿ, ಅಳತೆ ಪುಸ್ತಕಗಳು ಹಾಗೂ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು.

ಈ ಕೆಳಕಂಡ ಜಿಲ್ಲೆಗಳಲ್ಲಿರುವ ಪುರಸಭೆಗಳು ₹.44.74 ಲಕ್ಷದ ಮೊತ್ತದ ಕಾಮಗಾರಿಗಳ ಅಳತೆ ಪುಸ್ತಕಗಳು, ಓಚರುಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

(₹.ಲಕ್ಷಗಳಲ್ಲಿ)

| ಜಿಲ್ಲೆ | ನಗರಸಭೆ | ಮೊತ್ತ | ಪುರಸಭೆ | ಮೊತ್ತ | ಪಟ್ಟಣ ಪಂಚಾಯಿತಿ | ಮೊತ್ತ | ಒಟ್ಟು ಮೊತ್ತ |
|---|---|---|---|---|---|---|---|
| ಬೆಳಗಾವಿ | - | - | ರಾಮದುರ್ಗ | 0.67 | ಸದಲಗಾ | 0.88 | 1.55 |
| ಧಾರವಾಡ | - | - | - | - | ಕಲಘಟಗಿ | 43.19 | 43.19 |
| ಒಟ್ಟು | - | - | - | 0.67 | - | 44.07 | 44.74 |

## 3.8 ಕಾಮಗಾರಿ ಅಳತೆಗಳನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಂದ ಪರಿಶೀಲನೆ ಮಾಡಿಸದಿರುವುದು.

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರಸಭೆಯ 2009-10ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಲೋಕೋಪಯೋಗಿ ಇಲಾಖಾ ನಿಯಮಾವಳಿಗಳ (ಡಿ ಕೋಡ್) ಪ್ರಕಾರ ₹.25,000 ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿ ಬಿಲ್ಲುಗಳ ಅಳತೆಗಳ ಶೇ.25% ರಷ್ಟನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಂದ ಪರಿಶೀಲನೆಗೊಳಿಸಬೇಕಾಗಿರುತ್ತದೆ. ಆದರೆ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಒಟ್ಟು ₹.21.00 ಲಕ್ಷಗಳ ಮೊತ್ತದ ಬಿಲ್ಲುಗಳು ಕಾರ್ಯಪಾಲಕ ಅಭಿಯಂತರರಿಂದ ಪರಿಶೀಲನೆಗೊಂಡಿರುವುದಿಲ್ಲ ಎಂದು ಕಂಡುಬಂದಿದೆ. ಕಾರ್ಯಪಾಲಕ ಅಭಿಯಂತರರಿಂದ ಕೆಳಕಂಡ ಕಾಮಗಾರಿಗಳ ಅಳತೆಗಳನ್ನು ಮರು ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಧೃಢೀಕರಿಸಬೇಕಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರಿಂದ ಪರಿಶೀಲನೆಗೊಳ್ಳಬೇಕಾಗಿರುವ ಕಾಮಗಾರಿಗಳು

(₹.ಲಕ್ಷಗಳಲ್ಲಿ)

| ಕ್ರ ಸಂ | ಕಾಮಗಾರಿಯ ಹೆಸರು | ಬಿಲ್ಲಿನ ಮೊತ್ತ |
|---|---|---|
| 1 | ನಗರ ಸಭೆ ಕಛೇರಿ ನವೀಕರಣ ಹಾಗೂ ನಿಪ್ಪಾಣಿಕರ ಮೂರ್ತಿ ಅನಾವರಣ (ಎರಡನೇ ಹಾಗೂ ಅಂತಿಮ ಬಿಲ್ಲು) | 5.86 |
| 2 | ಅಗ್ನಿಶಾಮಕ ಠಾಣೆ ರಿಪೇರಿ (ಮೊದಲನೇ ಮತ್ತು ಅಂತಿಮ ಬಿಲ್ಲು) | 3.55 |
| 3 | ಸೋಕಸಾನೆ ಬೋಳದಲ್ಲಿ ಚರಂಡಿ ನಿರ್ಮಾಣ (ಪ್ರಥಮ ಅಂತಿಮ ಬಿಲ್ಲು) | 2.86 |
| 4 | ಪರೀಟ್ ಬೋಳದಲ್ಲಿ ಚರಂಡಿ ಮತ್ತು ಪೇವರ್ ಬ್ಲಾಕ್ (ಮೊದಲ ಮತ್ತು ಅಂತಿಮ ಬಿಲ್ಲು) | 2.56 |
| 5 | ಶಿವಾಜಿನಗರ ಭಂಗಿ ಪ್ಲಾಟ ಭಾಟ್‌ಗಲ್ಲಿ ಶೌಚಾಲಯ ರಿಪೇರಿ (ಮೊದಲ ಮತ್ತು ಅಂತಿಮ ಬಿಲ್ಲು) | 2.49 |
| 6 | ಕಾಟಕರ ಮಾಳ ಶೌಚಾಲಯ ರಿಪೇರಿ (ಮೊದಲ ಮತ್ತು ಅಂತಿಮ ಬಿಲ್ಲು) | 2.18 |
| 7 | ಸೋಕಸಾನೆ ಬೋಳದಲ್ಲಿ ಪೇವರ್ ಬ್ಲಾಕ್ | 0.89 |
| 8 | ಶಿಂತ್ರಿ ಕಾಲನಿ ಚರಂಡಿ ನಿರ್ಮಾಣ (ಮೊದಲ ಮತ್ತು ಅಂತಿಮ ಬಿಲ್ಲು) | 0.61 |
| | ಒಟ್ಟು | 21.00 |

### 3.9 ಕಾರ್ಮಿಕ ಸೆಸ್ಸು ಕಟಾವಣೆ ಮಾಡದಿರುವುದು ಹಾಗೂ ಹೆಚ್ಚಿನ ಮೊತ್ತವನ್ನು ಪಾವತಿ ಮಾಡಿರುವುದು.

ಅ) 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪುರಸಭೆಯ ಪುರಸಭಾ ನಿಧಿ 12ನೇ ಹಣಕಾಸು ಯೋಜನೆಯಲ್ಲಿ ಎಸ್.ಎಫ್.ಸಿ. ಹಾಗೂ ಐ.ಎಸ್.ಎಂ.ಟಿ ಯೋಜನೆಗಳಡಿ ಒಟ್ಟು ₹.3,09,73,900 ಗಳನ್ನು ವೆಚ್ಚ ಮಾಡಿದ್ದು, ಪ್ರಸ್ತುತ ಪ್ರಕರಣದಲ್ಲಿ ಕಾರ್ಮಿಕ ಸೆಸ್ಸು ಮೊತ್ತ ₹.3,09,739ಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡಿರುವುದಿಲ್ಲ, ಸರ್ಕಾರದ ಆದೇಶ ಸಂಖ್ಯೆ:ಎಲ್‌ಡಿ–300 ಎಲ್‌ಇ ಬಿ–2006 ದಿ:28-07-2007 ರ ಕಂಡಿಕೆ ಸಿ ಪ್ರಕಾರ ನಗರ: ಪಟ್ಟಣ: ಪುರಸಭೆಗಳ ಕಾಮಗಾರಿಗಳ ಅಂದಾಜಿನ ಮೇಲೆ ಶೇ.1 ರಂತೆ ಕಾರ್ಮಿಕ ಸೆಸ್ಸು ಕಟಾಯಿಸಿ ಕಾರ್ಮಿಕ ಕಲ್ಯಾಣ ಮಂಡಳಿಗೆ ಜಮೆ ಮಾಡಬೇಕಾಗಿರುತ್ತದೆ.

ಆ) ದಾವಣಗೆರೆ ಜಿಲ್ಲೆಯ ಹರಿಹರ ನಗರಸಭೆಯ 2009–10 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ–48 ಪ್ರಕಾರ ನಿರ್ಮಿತಿ ಕೇಂದ್ರದ ವತಿಯಿಂದ ₹.40,00,000ಗಳ ಮುಂಗಡ ಮೊತ್ತದಲ್ಲಿ ನಿರ್ವಹಿಸಿದ ಕಾಮಗಾರಿಗಳಲ್ಲಿ ಲೇಬರ್ ಸೆಸ್ ಹಾಗೂ ಇತರೆ ವೆಚ್ಚ ಎಂದು ₹.73,856 ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡು ಬಂದಿರುತದೆ. ಈ ರೀತಿ ಹೆಚ್ಚುವರಿಯಾಗಿ ಪಾವತಿ ಮಾಡಿರುವ ಮೊತ್ತವನ್ನು ವಸೂಲಿಸಬೇಕಾಗಿರುತ್ತದೆ.

## 3.10 ಶಾಸನಬದ್ಧ ಕಟಾವಣೆಗಳು ಮತ್ತು ಉಪಕರಗಳ ಒಟ್ಟು ಮೊತ್ತ ₹.4842.98 ಲಕ್ಷಗಳನ್ನು ಸರ್ಕಾರದ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡದಿರುವ ಬಗ್ಗೆ.

ಅ) ಕರ್ನಾಟಕ ಮುನಿಸಿಪಾಲಿಟಿಗಳ ಲೆಕ್ಕ ಪದ್ಧತಿ ಮತ್ತು ಬಜೆಟ್ ನಿಯಮಗಳು 2006 ನಿಯಮ 85 ರಂತೆ ಗುತ್ತಿಗೆದಾರರ ಬಿಲ್ಲುಗಳಲ್ಲಿ ವಸೂಲಿಸುವ ಶಾಸನ ಬದ್ಧ ಕಡಿತಗಳಾದ ಆದಾಯ ತೆರಿಗೆ, ರಾಜಧನ, ಮಾರಾಟ ತೆರಿಗೆ, ಇತ್ಯಾದಿಗಳನ್ನು ಮುಂದಿನ ತಿಂಗಳ 7ನೇ ತಾರೀಖಿನ ಒಳಗಾಗಿ ಸರ್ಕಾರದ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಬೇಕಿರುತ್ತದೆ. ಲೆಕ್ಕಪರಿಶೋಧನಾ ವರದಿಗಳ ಪ್ರಕಾರ ಸರ್ಕಾರಕ್ಕೆ ಜಮೆ ಮಾಡದೆ ಬಾಕಿ ಇರುವ ಮೊತ್ತದ ವಿವರಗಳು ಕೆಳಗಿನಂತಿವೆ.

(₹.ಲಕ್ಷಗಳಲ್ಲಿ)

| ಕ್ರ ಸಂ. | ಶಾಸನ ಬದ್ಧ ಕಟಾವಣೆಗಳು | ಪ್ರಾರಂಭಿಕ ಶಿಲ್ಕು | ಕಟಾಯಿಸಿರುವುದು | ಒಟ್ಟು | ಸರ್ಕಾರಕ್ಕೆ ಜಮಾ ಮಾಡಿರುವುದು | ಸರ್ಕಾರಕ್ಕೆ ಜಮಾ ಮಾಡದೆ ಇರುವುದು |
|---|---|---|---|---|---|---|
| 1 | ಆದಾಯ ತೆರಿಗೆ | 965.19 | 1826.59 | 2791.78 | 1531.74 | 1260.04 |
| 2 | ರಾಜಧನ | 1200.65 | 1081.56 | 2282.21 | 790.78 | 1491.43 |
| 3 | ಮಾರಾಟ ತೆರಿಗೆ | 1698.90 | 2722.68 | 4421.58 | 2361.97 | 2059.61 |
| 4 | ಕಾರ್ಮಿಕ ಕಲ್ಯಾಣ ನಿಧಿ | 20.15 | 76.22 | 96.37 | 64.47 | 31.90 |
| | ಒಟ್ಟು | **3884.89** | **5707.05** | **9591.94** | **4748.96** | **4842.98** |

ಆ) ಕರ್ನಾಟಕ ಮುನಿಸಿಪಾಲಿಟಿಗಳ ಲೆಕ್ಕ ಪದ್ಧತಿ ಮತ್ತು ಬಜೆಟ್ ನಿಯಮಗಳು 2006ರ ನಿಯಮ 85 ರಂತೆ ವಸೂಲಿಸಿರುವ ಶಾಸನ ಬದ್ಧ ಉಪಕರಗಳಾದ ಆರೋಗ್ಯ ಕರ, ಶಿಕ್ಷಣ ಕರ, ಗ್ರಂಥಾಲಯ ಕರ, ಅಭಿವೃದ್ಧಿ ಕರ, ಭಿಕ್ಷುಕರ ಕರ, ನೀರಿನ ಕರಗಳನ್ನು ಸರ್ಕಾರದ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಬೇಕಾಗಿರುತ್ತದೆ. 2009-10ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳ ಪ್ರಕಾರ ಕಟಾಯಿಸಿರುವ ಉಪಕರಗಳಲ್ಲಿ ₹.8948.92ಲಕ್ಷಗಳನ್ನು ಸರ್ಕಾರಕ್ಕೆ ಜಮೆ ಮಾಡದಿರುವುದು ಕಂಡು ಬಂದಿದ್ದು ವಿವರಗಳು ಕೆಳಗಿನಂತಿವೆ.

(₹.ಲಕ್ಷಗಳಲ್ಲಿ)

| ಕ್ರ ಸಂ. | ಶಾಸನ ಬದ್ಧ ಕಟಾವಣೆಗಳು | ಪ್ರಾರಂಭಿಕ ಶಿಲ್ಕು | ವಾರ್ಷಿಕ ವಸೂಲಿ | ಒಟ್ಟು | ಜಮೆ | ಸರ್ಕಾರಕ್ಕೆ ಜಮಾ ಮಾಡದೆ ಇರುವುದು |
|---|---|---|---|---|---|---|
| 1 | ಆರೋಗ್ಯ ಉಪಕರ | 4047.20 | 1292.40 | 5339.60 | 616.11 | 4723.49 |
| 2 | ಶಿಕ್ಷಣ ಉಪಕರ | 935.70 | 21.89 | 957.59 | 114.69 | 842.90 |
| 3 | ಗ್ರಂಥಾಲಯ ಉಪಕರ | 1054.15 | 520.18 | 1574.33 | 352.07 | 1222.26 |
| 4 | ಅಭಿವೃದ್ಧಿ ಉಪಕರ | 72.37 | 48.25 | 120.62 | 51.27 | 69.35 |
| 5 | ಭಿಕ್ಷುಕ ಉಪಕರ | 433.95 | 359.64 | 793.59 | 187.52 | 606.07 |
| 6 | ನೀರಿನ ಉಪಕರ | 955.85 | 848.21 | 1804.06 | 319.21 | 1484.85 |
| | ಒಟ್ಟು | **7499.22** | **3090.57** | **10589.79** | **1640.87** | **8948.92** |

(ಜಿಲ್ಲಾವಾರು ವಿವರಗಳನ್ನು ಅನುಬಂಧ- 6 ರಲ್ಲಿ ಲಗತ್ತಿಸಲಾಗಿದೆ)

## 3.11 ಖಾಸಗಿ ಬಡಾವಣೆಗಳ ವಿನ್ಯಾಸದ ಅನುಮೋದನೆ ನೀಡುವಾಗ ಸರಕಾರದ ಆದೇಶಗಳನ್ನು ಪಾಲಿಸದಿರುವುದು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 ರಲ್ಲಿ ರಚಿಸಲ್ಪಟ್ಟಿರುವ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿರುವ ನಗರಸಭೆ/ ಪುರಸಭೆ/ಪಟ್ಟಣ ಪಂಚಾಯತಿಗಳು ಖಾಸಗಿ ಬಡಾವಣೆಗಳ ಅನುಮೋದನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮದ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 104 ಬೆಂರೂಪ್ರಾ 2005 ದಿನಾಂಕ:31-5-2005 ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಖಾಸಗಿ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯದಿಂದಲೂ, ವಿದ್ಯುತ್ ಸೌಲಭ್ಯಕ್ಕೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಸಂಸ್ಥೆಯಿಂದಲೂ ಮತ್ತು ಉದ್ಯಾನವನ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿಯನ್ನು ತೋಟಗಾರಿಕೆ ಇಲಾಖೆಯ ಕಚೇರಿಯ ಸಹಾಯದಿಂದಲೂ ರೂಪಿಸಿ ಇನ್ನುಳಿದ ಸಿವಿಲ್ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಮಾತ್ರ ಸಂಬಂಧಿಸಿದ ಪೌರಸಂಸ್ಥೆಯ ತಾಂತ್ರಿಕ ಕಚೇರಿಯಿಂದ ರೂಪಿಸಿ ಸಿವಿಲ್ ಕಾಮಗಾರಿಯ ಅಂದಾಜು ಮೊತ್ತಕ್ಕೆ ಶೇ. 9 ರಂತೆ ಮೇಲ್ವಿಚಾರಣೆ ಶುಲ್ಕ ಮತ್ತು ಉಳಿದ ಕಾಮಗಾರಿಗಳ ಅಂದಾಜು ಪಟ್ಟಿಗಳ ಮೊತ್ತದ ಶೇ.17.5 ರಷ್ಟು ಇ.ಟಿ.ಪಿ. ಶುಲ್ಕವನ್ನು ನಿಗದಿಪಡಿಸಿ ಅದರಂತೆ ಒಟ್ಟು ಅಭಿವೃದ್ಧಿ ಶುಲ್ಕವನ್ನು ಪಾವತಿಸಲು ಅವಕಾಶ ಮಾಡಿಕೊಡಲಾಗಿದೆ.

ಅರ್ಜಿದಾರರು ಸಿವಿಲ್ ಕಾಮಗಾರಿಯನ್ನು ಸ್ವತ: ಕೈಗೊಳ್ಳುವ ಬಗ್ಗೆ ಅರ್ಜಿಸಲ್ಲಿಸಿದಲ್ಲಿ ಮಾತ್ರ ಸಿವಿಲ್ ಕಾಮಗಾರಿಯ ಅಂದಾಜು ವೆಚ್ಚದ ಶೇ.9ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಿಕೊಳ್ಳಬೇಕಾಗುತ್ತದೆ.

ವಿನ್ಯಾಸದ ಒಳಚರಂಡಿ, ವಿದ್ಯುತ್, ಉದ್ಯಾನವನ ಇತ್ಯಾದಿಗಳ ಅಂದಾಜು ಪಟ್ಟಿಯನ್ನು ಸಂಬಂಧಿಸಿದ ಮಂಡಳಿಗಳ/ಕಚೇರಿಗಳ ನೆರವಿನೊಂದಿಗೆ ರೂಪಿಸಿ ಆಯಾ ಇಲಾಖೆಯ ಅಂದಾಜು ವೆಚ್ಚದ ಶೇ.17.5 ರಷ್ಟು ಇಟಿ.ಪಿ ಶುಲ್ಕ ಸೇರಿಸಿ ಒಟ್ಟು ಅಭಿವೃದ್ಧಿ ಶುಲ್ಕ ವಸೂಲಿಸಬೇಕಾಗಿರುತ್ತದೆ.

ಅರ್ಜಿದಾರರು ಸಿವಿಲ್ ಕಾಮಗಾರಿಗಳನ್ನು ಹಾಗೂ ಉಳಿದ ಅಭಿವೃದ್ಧಿ ಶುಲ್ಕವನ್ನು ಪಾವತಿಸಿ, ವಿನ್ಯಾಸದಲ್ಲಿರುವ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳ ನಿವೇಶನಗಳನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರವೇ ವಿನ್ಯಾಸವನ್ನು ಅರ್ಜಿದಾರರಿಗೆ ಬಿಡುಗಡೆ ಮಾಡಬೇಕಾಗುತ್ತದೆ. ಈ ಕುರಿತು ಸಂಬಂಧಿಸಿದ ಯೋಜನಾ ಪ್ರಾಧಿಕಾರ ಪ್ರಾರಂಭಿಕ ಪ್ರಮಾಣ ಪತ್ರ ನೀಡಿದ ನಂತರ ಮಾತ್ರ ನಿವೇಶನಗಳಿಗೆ ಖಾತೆ ಮಾಡಿ, ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಲು ಅವಕಾಶವಿರುತ್ತದೆ.

ಆದರೆ ಈ ಕೆಳಕಂಡ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಲೆಕ್ಕಗಳನ್ನು ಪರಿಶೀಲಿಸಿದಾಗ ಮೇಲ್ಕಂಡ ಸರ್ಕಾರದ ಸೂಚನೆಗಳನ್ನು ಪೂರ್ಣವಾಗಿ ಪಾಲಿಸದೆ ಖಾಸಗಿ ಬಡಾವಣೆಗಳ ವಿನ್ಯಾಸಗಳ ಅನುಮೋದನೆ ಮಾಡಿರುವುದನ್ನು ಗಮನಿಸಲಾಗಿದೆ.

| ಜಿಲ್ಲೆಗಳು | ನಗರ ಸ್ಥಳೀಯ ಸಂಸ್ಥೆಗಳು |
|---|---|
| ಬೆಂಗಳೂರು ಜಿಲ್ಲೆ | ಪುರಸಭೆ, ಆನೇಕಲ್ |
| ಬೆಳಗಾವಿ ಜಿಲ್ಲೆ | ನಗರಸಭೆ, ನಿಪ್ಪಾಣಿ |
| —,,— | ನಗರಸಭೆ, ನಿಪ್ಪಾಣಿ |
| —,,— | ಪುರಸಭೆ, ಅಥಣಿ |
| —,,— | ಪುರಸಭೆ, ಸಂಕೇಶ್ವರ |
| —,,— | ಪುರಸಭೆ, ಚಿಕ್ಕೋಡಿ |
| —,,— | ಪಟ್ಟಣ ಪಂಚಾಯಿತಿ, ಹುಕ್ಕೇರಿ |

## 3.12 ಅಧಿಕಾರ ವ್ಯಾಪ್ತಿ ಮೀರಿ ನಮೂನೆಗಳನ್ನು ಮುದ್ರಿಸಿಕೊಂಡಿರುವುದು.

ಬಾಗಲಕೋಟೆ ಜಿಲ್ಲೆಯ ತೇರದಾಳ ಪುರಸಭೆಯಲ್ಲಿ **2009-10ನೇ** ಸಾಲಿನಲ್ಲಿ ಖಾಸಗಿ ಮುದ್ರಣಾಲಯದಿಂದ ನಮೂನೆಗಳನ್ನು ಮುದ್ರಿಸಲು ₹.1,75,833 ವೆಚ್ಚ ಮಾಡಲಾಗಿದೆ. ಕರ್ನಾಟಕ ಪುರಸಭೆ ಖರ್ಚು ಮಾಡುವ ಅಧಿಕಾರಗಳ ನಿಯಮಗಳು (2003 ರ ಅಧಿಸೂಚನೆ ನಂ. UDD 01 TMS 2003 ಬೆಂಗಳೂರು. ದಿನಾಂಕ:03-02-2004) ಪ್ರಕಾರ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ವಾರ್ಷಿಕ ₹.20,000ಗಳ ಮಿತಿಗೆ ಒಳಪಟ್ಟು ಮುದ್ರಿಸಲು ಅಧಿಕಾರ ಪ್ರತ್ಯಾಯೋಜನೆಯಿರುತ್ತದೆ. ಆದರೆ ಮುಖ್ಯಾಧಿಕಾರಿಗಳು ಪ್ರಸ್ತುತ ಪ್ರಕರಣದಲ್ಲಿ ತಮ್ಮ ಅಧಿಕಾರ ವ್ಯಾಪ್ತಿ ಮೀರಿ ₹.1,55,833 ಗಳ ವೆಚ್ಚ ಮಾಡಿರುವುದು ಕಂಡು ಬಂದಿರುತ್ತದೆ.

## 3.13 ಲೆಕ್ಕಪತ್ರ ನಿರ್ವಹಣೆಯಲ್ಲಿ ಗಮನಿಸಲಾದ ಪ್ರಮುಖ ನ್ಯೂನತೆಗಳು.

2009-10ನೇ ಸಾಲಿನಲ್ಲಿ ಬಿಡುಗಡೆಯಾದ 189 ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಪ್ರಕಾರ ಲೆಕ್ಕಪತ್ರ ನಿರ್ವಹಣೆಯಲ್ಲಿ ಗಮನಿಸಲಾದ ಪ್ರಮುಖ ನ್ಯೂನ್ಯತೆಗಳು ಈ ಕೆಳಕಂಡಂತಿವೆ.

1. ಹಿಂದಿನ ಲೆಕ್ಕಪರಿಶೋಧನಾ ವರದಿಗಳಿಗೆ ನಿಗದಿತ ಅವಧಿಯಲ್ಲಿ ಅನುಸರಣಾ ವರದಿ ಸಲ್ಲಿಸದಿರವುದು.
2. ಮಾಸಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದು.
3. ಜಮಾ ಮತ್ತು ಖರ್ಚಿನ ವರ್ಗೀಕೃತ ರಿಜಿಸ್ಟರ್ ನಿರ್ವಹಿಸದಿರುವುದು
4. ಸಾಲದ/ಮುಂಗಡ ರಿಜಿಸ್ಟರ್ ನಿರ್ವಹಿಸದೆ ಇರುವುದು.
5. ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡದಿರುವುದು.
6. ಮುಂಗಡಗಳನ್ನು ಹೊಂದಾಣಿಕೆ ಮಾಡಿಕೊಳ್ಳದಿರುವುದು.
7. ಆಸ್ತಿ ತೆರಿಗೆ/ನೀರಿನ ತೆರಿಗೆ, ಮಳಿಗೆ ಬಾಡಿಗೆ ಇತ್ಯಾದಿಗಳ ಡಿ.ಸಿ.ಬಿ ರಿಜಿಸ್ಟರನ್ನು ಸರಿಯಾಗಿ ನಿರ್ವಹಿಸದಿರುವುದು ಹಾಗೂ ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದು.
8. ಉಪಕರಗಳನ್ನು ಸರ್ಕಾರಕ್ಕೆ ಸಂದಾಯ ಮಾಡದೇ ಇರುವುದು.

9. ಎರವಲು [illegible]ದಿಗಳ ರಜಾ ವೇತನ ಮತ್ತು ಪಿಂಚಣಿ ವಂತಿಕೆಗಳನ್ನು ಸರ್ಕಾರಕ್ಕೆ ಸಂದಾಯ ಮಾಡದಿರುವುದು.
10. ಕಾಮಗಾರಿ ರಿಜಿಸ್ಟರ್, ಇ.ಎಂ.ಡಿ ರಿಜಿಸ್ಟರ್ ನಿರ್ವಹಿಸದಿರುವುದು.
11. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ, ಕೆಲಸದ ಆದೇಶ ಇತ್ಯಾದಿ ದಾಖಲೆಗಳನ್ನು ಲೆಕ್ಕ ತನಿಖೆಗೆ ಒದಗಿಸದಿರುವುದು.
12. ಕಾಮಗಾರಿ ಬಿಲ್‌ನಲ್ಲಿ ರಾಜಧನ, ಆದಾಯ ತೆರಿಗೆ ಕಡಿಮೆ ಕಟಾಯಿಸಿರುವುದು/ ಕಟಾಯಿಸದಿರುವುದು/ಕಟಾಯಿಸಿರುವ ತೆರಿಗೆಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವುದು.
13. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳನ್ನು ಪಾಲಿಸದೆ ಇರುವುದು.

### 3.14 ಸಾಮಾನ್ಯ ಅಭಿಪ್ರಾಯ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಸಾಮಾನ್ಯ ಲೋಪದೋಷಗಳು, ಕಾರ್ಯ ವಿಧಾನದ ಲೋಪಗಳು, ನಿಯಮಗಳ ಉಲ್ಲಂಘನೆಯ ಪ್ರಕರಣಗಳು, ಅನಗತ್ಯ, ಅನಪೇಕ್ಷಿತ ವೆಚ್ಚಗಳು, ಸರ್ಕಾರಕ್ಕೆ ಜಮಾ ಮಾಡಬೇಕಾದ ತೆರಿಗೆ/ಶುಲ್ಕದ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿಯೇ ಉಳಿಸಿಕೊಂಡು ಎಸಗಿರುವ ತಾತ್ಕಾಲಿಕ ಹಣದುರುಪಯೋಗದ ಪ್ರಕರಣಗಳು, ಇತರೆ ಯೋಜನೆಗಳ ಹಣದುರುಪಯೋಗದ ಉದಾಹರಣೆಗಳು ಮತ್ತು ನಿಗದಿತ ತೆರಿಗೆಗಳನ್ನು ಕಡಿಮೆ ಪ್ರಮಾಣದಲ್ಲಿ ವಸೂಲಿ ಮಾಡಿರುವ ವಿವರಗಳು ಮುಂತಾದ ಅಂಶಗಳಿಗೆ ಲೆಕ್ಕಪರಿಶೋಧನೆಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಇಂತಹವುಗಳು ಪುನರಾವರ್ತನೆ ಆಗದಂತೆ ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ವರ್ಗವು ಸೂಕ್ತ ಕ್ರಮ ಜರುಗಿಸುವುದಲ್ಲದೇ ಲೆಕ್ಕಪರಿಶೋಧನೆಯಲ್ಲಿ ಸೂಚಿಸಿರುವ ಮೌಲಿಕ ಆಕ್ಷೇಪಣೆ, ವಸೂಲಾತಿಗಳ ಕಂಡಿಕೆಗಳಿಗೆ ನಿಗದಿತ ಅವಧಿಯಲ್ಲಿ ಸೂಕ್ತ ಕ್ರಮವಹಿಸಿ ತೀರುವಳಿ ಪ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ.

ಬಹುತೇಕ ನಗರ ಸ್ಥಳೀಯ ಸಂಸ್ಥೆಗಳು ಸ್ವಂತ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದೆ ಸರ್ಕಾರದ ಅನುದಾನದ ಮೇಲೆ ಅವಲಂಬಿತವಾಗಿರುವುದರಿಂದ ಅಭಿವೃದ್ಧಿಯು ಕುಂಠಿತವಾಗಿರುತ್ತದೆ. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಕ್ರಿಯಾಶೀಲ ಪಾತ್ರವನ್ನು ವಹಿಸಿ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ.

ಒಟ್ಟಾರೆ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಸುಧಾರಣೆಯು ಅಗತ್ಯವಾಗಿದೆಯೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

## ಭಾಗ-II

# ಮಹಾನಗರ ಪಾಲಿಕೆಗಳು

**ಪೀಠಿಕೆ**

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 150 ರಂತೆ ಸಂಬಂಧಪಟ್ಟ ಮಹಾನಗರ ಪಾಲಿಕೆಗಳ ಮುಖ್ಯ ಲೆಕ್ಕಪರಿಶೋಧಕರು (ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟು) ನಗರ ಪಾಲಿಕೆಯ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕತನಿಖೆಯನ್ನು ನಡೆಸಲು ನೇಮಕಗೊಂಡಿರುತ್ತಾರೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಕಲಂ 150 2(ಬಿ), ದಿನಾಂಕ:14-3-2012 ರಿಂದ ಜಾರಿಗೆ ಬಂದಿರುವ ಪ್ರಕಾರ, ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನ ಮಂಡಳದ ಮುಂದೆ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಅದರಂತೆ, ಸದರಿ ಸಂಸ್ಥೆಗಳ 31 ಮಾರ್ಚ್ 2010ರ ಅಂತ್ಯದ ಲೆಕ್ಕಪರಿಶೋಧನಾ ವರದಿಗಳ ಆಧಾರದ ಮೇರೆಗೆ ಈ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸಲಾಗಿದೆ.

## ಅಧ್ಯಾಯ-4

## ಮಹಾನಗರ ಪಾಲಿಕೆಗಳ ಸ್ಥೂಲನೋಟ.

### 4.1 ಹಿನ್ನೆಲೆ

ಕರ್ನಾಟಕ ರಾಜ್ಯದಲ್ಲಿ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಅಡಿಯಲ್ಲಿ ಈ ಕೆಳಕಂಡ ಎಂಟು ಮಹಾನಗರ ಪಾಲಿಕೆಗಳು ಕಾರ್ಯನಿರ್ವಹಿಸುತ್ತಿವೆ.

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಮೈಸೂರು ಮಹಾನಗರ ಪಾಲಿಕೆ
3) ಬೆಳಗಾವಿ ಮಹಾನಗರ ಪಾಲಿಕೆ
4) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
5) ಗುಲ್ಬರ್ಗಾ ಮಹಾನಗರ ಪಾಲಿಕೆ
6) ಮಂಗಳೂರು ಮಹಾನಗರ ಪಾಲಿಕೆ
7) ಬಳ್ಳಾರಿ ಮಹಾನಗರ ಪಾಲಿಕೆ
8) ದಾವಣಗೆರೆ ಮಹಾನಗರ ಪಾಲಿಕೆ

[illegible]

విషయం:- 2011-12 వ సాలు [illegible] సమాచారం

[illegible]

[illegible] 2011-12 వ సాలు [illegible] 31-3-2013 నాటికి 31-3-2014 [illegible]

[illegible]

| క్ర.సం. | 31-3.2012 నాటికి [illegible] | 11-12 వ సాలు [illegible] | | | 11-12 వ సాలు [illegible] | |
|---|---|---|---|---|---|---|
| | | 31-3-2013 [illegible] | 31-3-2014 [illegible] | [illegible] | [illegible] | [illegible] |
| (1) | (2) | (3) | | | | |
| [illegible] | | [illegible] | | | | |

## 4.2 ಮಹಾನಗರ ಪಾಲಿಕೆಗಳ ಸಾಂಸ್ಥಿಕ ರಚನೆ:

ಕರ್ನಾಟಕ ರಾಜ್ಯದಲ್ಲಿನ 8 ಮಹಾನಗರ ಪಾಲಿಕೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೇರವಾಗಿ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಳಿದ 7 ಮಹಾನಗರ ಪಾಲಿಕೆಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಯು.ಡಿ.ಡಿ 132 ಎಂ.ಎಲ್.ಆರ್ 2008 ದಿ:23-8-2008 ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 30 ಎ.ಬಿ.ಸಿ. 2009 ದಿ:22-6-2009 ರನ್ವಯ ನಗರಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಪೌರಾಡಳಿತ ನಿರ್ದೇಶನಾಲಯದ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿವೆ.

### ಮಹಾನಗರ ಪಾಲಿಕೆಗಳ ಕಾರ್ಯಕಾರಿ ವ್ಯವಸ್ಥೆ

ಆಯುಕ್ತರು ಮಹಾನಗರ ಪಾಲಿಕೆಗಳ ಕಾರ್ಯಕಾರಿ ಮುಖ್ಯಸ್ಥರಾಗಿರುತ್ತಾರೆ. ಮಹಾನಗರ ಪಾಲಿಕೆಗಳ ಅಧಿಕಾರಿಗಳು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸಲಾಗಿರುವ ಅಧಿಕಾರಗಳನ್ನು ಹೊಂದಿರುತ್ತಾರೆ ಮತ್ತು ಕಾರ್ಯಗಳನ್ನು ನಿರ್ವಹಿಸುತ್ತಾರೆ. ಮಹಾನಗರ ಪಾಲಿಕೆಗಳ ಕಾರ್ಯಕಾರಿ ವ್ಯವಸ್ಥೆ ಈ ಕೆಳಗಿನಂತಿರುತ್ತದೆ.




ಮಹಾನಗರ ಪಾಲಿಕೆಗಳಲ್ಲಿ ಜನರಿಂದ ಚುನಾಯಿತಗೊಂಡ ಪೌರ ಕೌನ್ಸಿಲರುಗಳಿಂದ ಬಹುಮತದ ಮೇರೆಗೆ ಚುನಾಯಿತವಾಗುವ ಮೇಯರ್ ಮಹಾನಗರ ಪಾಲಿಕೆಯ ಆಡಳಿತಕ್ಕೆ ಜವಾಬ್ದಾರರಾಗಿರುತ್ತಾರೆ.

ಅದರಂತೆ ಮಹಾನಗರ ಪಾಲಿಕೆಗಳ ಚುನಾಯಿತ ಸದಸ್ಯರನ್ನು ಹೊಂದಿರುವ ಸ್ಥಾಯಿ ಸಮಿತಿಗಳು ಅವುಗಳ ಅಧಿಕಾರ ವ್ಯಾಪ್ತಿಗನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ.

## 4.3 ಮಹಾನಗರ ಪಾಲಿಕೆಗಳ ಸಾಮಾನ್ಯ, ನಿರ್ಬಂಧಕ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು.

ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 57, 58 ಮತ್ತು 59ರಲ್ಲಿ ಮಹಾನಗರ ಪಾಲಿಕೆಗಳ ಸಾಮಾನ್ಯ, ನಿರ್ಬಂಧಕ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳನ್ನು ವಿವರಿಸಲಾಗಿದೆ.

## 4.4 ಲೆಕ್ಕಪತ್ರಗಳ ಲೆಕ್ಕಪರಿಶೋಧನೆ:

ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ರ ಕಲಂ 150(2) ರನ್ವಯ ಸರ್ಕಾರವು ಒಬ್ಬ ಅಧಿಕಾರಿಯನ್ನು ನಿಗಮದ ಮುಖ್ಯ ಲೆಕ್ಕಪರಿಶೋಧಕರಾಗಿ ನೇಮಕ ಮಾಡತಕ್ಕದ್ದು. ಅವರು ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ ಇವರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟು ನಿಗಮದ ಲೆಕ್ಕಪತ್ರಗಳ ಪರಿಶೋಧನೆ ಮಾಡತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವರು ನಿಗಮಗಳ ಲೆಕ್ಕಪತ್ರಗಳಿಗೆ ಮತ್ತು ಎಲ್ಲಾ ಸ್ವೀಕೃತಿಗಳ ಮತ್ತು ವೆಚ್ಚಗಳ ಲೆಕ್ಕಗಳಿಗೆ ಪ್ರವೇಶಾವಕಾಶವಿರತಕ್ಕದ್ದು ಮತ್ತು ಅವರಿಗೆ ಅಗತ್ಯವಾಗಬಹುದಾದ ಯಾವುದೇ ಸ್ವೀಕೃತಿ ಅಥವಾ ವೆಚ್ಚಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕಮೀಷನರು ಒದಗಿಸತಕ್ಕದ್ದು.

ಕಲಂ 150(3) ರನ್ವಯ ನಿಗಮದ ಮುಖ್ಯ ಲೆಕ್ಕಪರಿಶೋಧಕರು, ವೆಚ್ಚದಲ್ಲಿ ಅಥವಾ ನಿಗಮಕ್ಕೆ ಬಾಕಿಯಿರುವ ಹಣದ ವಸೂಲಿಯಲ್ಲಿ ಅಥವಾ ನಿಗಮದ ಲೆಕ್ಕಪತ್ರಗಳಲ್ಲಿ ಅವರು ಯಾವುದೇ ಕಾಲದಲ್ಲಿ ಗಮನಿಸಬಹುದಾದ ಯಾವುದೇ ಮುಖ್ಯ ಅನುಚಿತತೆ ಅಥವಾ ಅಕ್ರಮತೆಯನ್ನು ನಿಗಧಿತ ಪೌರಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ನಿಯಮಗಳಲ್ಲಿ ವಿಧಿಸಬಹುದಾದಂತ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸತಕ್ಕದ್ದು.

ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರ ಪರಿಶಿಷ್ಟ-9ರ ಭಾಗ-2ರಲ್ಲಿ ಮುಖ್ಯಲೆಕ್ಕಪರಿಶೋಧಕರ ಅಧಿಕಾರ ಮತ್ತು ಪ್ರಕಾರ್ಯಗಳನ್ನು ವಿವರಿಸಲಾಗಿದ್ದು, ಈ ನಿಯಮಗಳ ಉಪನಿಯಮ(11)ರನ್ವಯ ಲೆಕ್ಕಪರಿಶೋಧಕರು ತನ್ನ ವರದಿಯಲ್ಲಿ;

(ಎ) ಕಾನೂನಿಗೆ ತದ್ವಿರುದ್ದವೆಂದು ತನಗೆ ಕಂಡು ಬಂದ ಪ್ರತಿಯೊಂದು ಸಂದಾಯದ;

(ಬಿ) ಯಾವನೇ ವ್ಯಕ್ತಿಯ ಅತೀವ ನಿರ್ಲಕ್ಷತೆ ಅಥವಾ ದುರ್ನಡತೆಯಿಂದ ಉಂಟಾಗಿದೆ ಎಂದು ಕಂಡುಬಂದ ಯಾವುದೇ ಕೊರತೆ ಅಥವಾ ಮೊಬಲಗಿನ

(ಸಿ) ಯಾವನೇ ವ್ಯಕ್ತಿಯು ಲೆಕ್ಕಕ್ಕೆ ತರಲೇಬೇಕಾದ ಆದರೆ ತರದಿರದಂತಹ ಸ್ವೀಕರಿಸಲಾದ ಯಾವುದೇ ಮೊತ್ತದ ಮೊಬಲಗನ್ನು ಮತ್ತು;

(ಡಿ) (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ ಲೆಕ್ಕಪತ್ರಗಳಲ್ಲಿ ಅವನಿಗೆ ಕಂಡುಬರಬಹುದಾದ ಯಾವುದೇ ಮುಖ್ಯ ಅನುಚಿತತೆ ಅಥವಾ ಕ್ರಮ ದೋಷದ ವಿವರಣೆಯನ್ನು ಸೇರಿಸತಕ್ಕದ್ದು.

ಇದೇ ನಿಯಮಗಳ ನಿಯಮ 14(1)ರ ಪ್ರಕಾರ ಲೆಕ್ಕಪರಿಶೋಧಕರು ಕಾನೂನು ಸಮ್ಮತವಲ್ಲದ ಸಂದಾಯವನ್ನು ಮಾಡಿರುವ ಅಥವಾ ಮಾಡಲು ಅಧಿಕೃತಗೊಳಿಸಿರುವ ವ್ಯಕ್ತಿಯ ಮೇಲೆ ಅಧಿಭಾರ ಹೊರಿಸಬಹುದು ಹಾಗೂ ಬುದ್ಧಿಪೂರ್ವಕ ನಿರ್ಲಕ್ಷತೆ ಅಥವಾ ನಡತೆಯಿಂದ ವಹಿಸಿದ ಯಾವುದೇ ಕೊರತೆ ಅಥವಾ ನಷ್ಟ ಮೊಬಲಗು ಅಥವಾ ಆ ವ್ಯಕ್ತಿಯು ಲೆಕ್ಕಕ್ಕೆ ತರಲೇಬೇಕಾದ ಆದರೆ ತಂದಿರದ ಯಾವುದೇ ಮೊತ್ತವನ್ನು ಜವಾಬ್ದಾರನಾದ ಯಾವನೇ ವ್ಯಕ್ತಿಯ ಮೇಲೆ ವಿಧಿಸಬಹುದು.

# ಅಧ್ಯಾಯ 5

## ಹಣಕಾಸಿನ ಸ್ಥೂಲನೋಟ

### 5.1. ಮಹಾನಗರ ಪಾಲಿಕೆಗಳ ಸಂಪನ್ಮೂಲಗಳು.

ಮಹಾನಗರ ಪಾಲಿಕೆಗಳು ತೆರಿಗೆ ಹಾಗೂ ತೆರಿಗೆಯೇತರ ಕಂದಾಯಗಳನ್ನು ವಿಧಿಸಲು ಹಾಗೂ ವಸೂಲಿ ಮಾಡಲು ಶಾಸನಬದ್ಧ ಅಧಿಕಾರ ಹೊಂದಿವೆ. ಮಹಾನಗರ ಪಾಲಿಕೆಗಳ ಹಣಕಾಸು ಮೂಲಗಳೆಂದರೆ, ಸ್ವಂತ ಆಕರಗಳಿಂದ ಬರುವ ಸ್ವೀಕೃತಿಗಳು, ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದ ಅನುದಾನ ಮತ್ತು ಸಹಾಯ ಹಾಗೂ ರಾಜ್ಯ ಸರ್ಕಾರ ಅನುಮೋದಿಸುವ ಹಣಕಾಸು ಸಂಸ್ಥೆಗಳಿಂದ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲಗಳಿಂದ ಕೂಡಿದೆ. ಭೂಮಿ ಮತ್ತು ಕಟ್ಟಡಗಳ ಮೇಲಿನ ಆಸ್ತಿ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯದ ಮೂಲಾಧಾರವಾಗಿದೆ. ಕೆಲವು ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವು ನಗರ ಸ್ಥಳೀಯ ಸಂಸ್ಥೆಯಲ್ಲಿದ್ದಾಗ್ಯೂ, ದರ ಮತ್ತು ದರ ಪರಿಷ್ಕರಣೆ, ಸಂಗ್ರಹಿಸುವ ಕ್ರಮ, ನಿರ್ಧರಣೆಯ ರೀತಿ, ವಿನಾಯಿತಿಗಳು, ರಿಯಾಯಿತಿಗಳು ಮುಂತಾದ ನೀತಿ ನಿರೂಪಣೆಗೆ ಸಂಬಂಧಿಸಿದ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿದೆ. ಮಹಾನಗರ ಪಾಲಿಕೆಗಳ ತೆರಿಗೆಯೇತರ ಆದಾಯವು ರಾಜಸ್ವ, ಬಾಡಿಗೆ, ಪ್ಲಾನ್/ಮ್ಯುಟೇಶನ್ ಶುಲ್ಕಗಳು, ನೀರಿನ ದರ ಮುಂತಾದವುಗಳನ್ನೊಳಗೊಂಡಿದೆ.

ಮಹಾನಗರ ಪಾಲಿಕೆಯ ಸಂಪನ್ಮೂಲಗಳ ಹರಿವಿನ ನಕ್ಷೆ ಈ ಕೆಳಗಿನಂತಿದೆ.



## 5.2 ಮಹಾನಗರ ಪಾಲಿಕೆಗಳ ಲೆಕ್ಕಪರಿಶೋಧನೆಯ ಸ್ಥೂಲನೋಟ.

ರಾಜ್ಯ ಲೆಕ್ಕಪತ್ರ ಇಲಾಖೆಯ ಮೇಲ್ವಿಚಾರಣೆಯಲ್ಲಿ ಮಹಾನಗರಪಾಲಿಕೆಗಳಲ್ಲಿ ಇರುವ ಮುಖ್ಯ ಲೆಕ್ಕಪರಿಶೋಧಕರು ಪ್ರಸ್ತುತ ವರ್ಷದಲ್ಲಿ ಈ ಕೆಳಕಂಡ ವರ್ಷಗಳ ಮಹಾನಗರ ಪಾಲಿಕೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಿ ವರದಿಗಳನ್ನು ಬಿಡುಗಡೆ ಮಾಡಿರುತ್ತಾರೆ.

| ಕ್ರಮ ಸಂಖ್ಯೆ | ಮಹಾನಗರ ಪಾಲಿಕೆ | ಲೆಕ್ಕ ಪರಿಶೋಧನಾ ವರದಿ ಬಿಡುಗಡೆ ಮಾಡಿದ ವರ್ಷ |
|---|---|---|
| 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 2008-09-2009-10* |
| 2 | ಮೈಸೂರು ಮಹಾನಗರ ಪಾಲಿಕೆ | 2006-07 |
| 3 | ಬೆಳಗಾಂ ಮಹಾನಗರ ಪಾಲಿಕೆ | 2008-09 |
| 4 | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ | 2008-09 |
| 5 | ಗುಲ್ಬರ್ಗಾ ಮಹಾನಗರ ಪಾಲಿಕೆ | 2008-09 |
| 6 | ಮಂಗಳೂರು ಮಹಾನಗರ ಪಾಲಿಕೆ | 2008-09 |
| 7 | ಬಳ್ಳಾರಿ ಮಹಾನಗರ ಪಾಲಿಕೆ | 2009-10 |
| 8 | ದಾವಣಗೆರೆ ಮಹಾನಗರ ಪಾಲಿಕೆ | 2007-08 |

* ವಿಶೇಷ ಲೆಕ್ಕಪರಿಶೋಧನೆ

ಈ ಮೇಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಲಾಗಿರುವ ಪ್ರಮುಖ ಅಂಶಗಳನ್ನು ಕ್ರೋಢೀಕೃತ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

## 5.3 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**5.3.1** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಹಿಂದೆ ಇದ್ದ ಬೆಂಗಳೂರು ಮಹಾನಗರ ಪಾಲಿಕೆ, ಏಳು ನಗರ ಸಭೆಗಳು, ಒಂದು ಪುರಸಭೆ ಹಾಗೂ ಸುಮಾರು 110 ಗ್ರಾಮಗಳನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಳ್ಳುವುದರ ಮೂಲಕ ದಿನಾಂಕ:16-01-2007 ರಿಂದ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರಲ್ಲಿ ಹೇಳಿರುವಂತೆ ಬೆಂಗಳೂರಿನ ನಾಗರೀಕರಿಗೆ ನಾಗರೀಕ ಸೇವೆಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ತನ್ನ ಕಾರ್ಯಗಳನ್ನು ಅನುಷ್ಠಾನಕ್ಕೆ ತರುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ನಂತರ ತನ್ನ ವಿಸ್ತೀರ್ಣವನ್ನು 226 ಚ.ಕಿ.ಮೀ ನಿಂದ ಸುಮಾರು 800 ಚ.ಕಿ.ಮೀ.ಗಳಿಗೆ ವಿಸ್ತರಿಸಿಗೊಂಡಿದ್ದು 198 ವಾರ್ಡ್‌ಗಳನ್ನು ಹೊಂದಿರುತ್ತದೆ. ಆಯುಕ್ತರು ಮಹಾನಗರ ಪಾಲಿಕೆಯ ಮುಖ್ಯಸ್ಥರಾಗಿರುತ್ತಾರೆ. ಮಹಾನಗರ ಪಾಲಿಕೆಯ ಆಡಳಿತವನ್ನು ಸುಗಮವಾಗಿ ನಡೆಸುವ ಸಲುವಾಗಿ ಈ 198 ವಾರ್ಡ್‌ಗಳನ್ನು ಎಂಟು ವಲಯಗಳಲ್ಲಿ ವಿಂಗಡಿಸಿ, ಪ್ರತಿಯೊಂದು ವಲಯಕ್ಕೆ ಅಪರ/ಜಂಟಿ ಆಯುಕ್ತರನ್ನು ನೇಮಿಸಲಾಗಿದೆ. ಇವರು ವಲಯಗಳ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆ ನಡೆಸುತ್ತಾರೆ. ಎಂಟು ವಲಯಗಳಡಿಯಲ್ಲಿ 481 ಬಟವಾಡೆ ಅಧಿಕಾರಿಗಳ ಕಚೇರಿಗಳನ್ನು ತೆರೆಯಲಾಗಿದೆ.

### 5.3.2 ಲೆಕ್ಕಪತ್ರಗಳ ಸ್ಥೂಲನೋಟ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಷೆಡ್ಯೂಲ್ (ix) ಭಾಗ III ನಿಯಮ 17ರಂತೆ ಪ್ರತಿ ಮಹಾನಗರ ಪಾಲಿಕೆಯು;

ಎ) ಆಯವ್ಯಯ ಅಂದಾಜುಗಳು, ಆಯವ್ಯಯ ಪಟ್ಟಿ ಮತ್ತು ನಗರಪಾಲಿಕೆಗಳ ನಿಯತಕಾಲಿಕ ವರದಿಗಳನ್ನು ನಿರ್ವಹಿಸುವ ನಮೂನೆಗಳು.

ಬಿ) ನಗರ ಪಾಲಿಕೆಯ ಲೆಕ್ಕಪತ್ರಗಳನ್ನು ನಿರ್ವಹಿಸುವ ನಮೂನೆಗಳು

ಇವುಗಳ ಬಗ್ಗೆ ನಿಯಮಗಳನ್ನು (Regulations) ಮಾಡಬೇಕಾಗಿರುತ್ತದೆ.

ಸದರಿ ಅಧಿನಿಯಮದ ಕಲಂ 422ರ ಪ್ರಕಾರ ಮಹಾನಗರ ಪಾಲಿಕೆಯು ಇಂತಹ ನಿಯಮಗಳನ್ನು (Regulations) ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ಪ್ರಕಟಣೆ ಮೂಲಕ ರೂಪಿಸಿಕೊಳ್ಳಬಹುದಾಗಿದೆ ಮತ್ತು ಕಲಂ 150(1)ರನ್ವಯ ಲೆಕ್ಕಪತ್ರಗಳನ್ನು ನಿಗಧಿತ ನಮೂನೆಗಳಲ್ಲಿ ನಿರ್ವಹಣೆ ಮಾಡಬೇಕಾಗಿದೆ. ಹಾಗಿದ್ದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ನಿಟ್ಟಿನಲ್ಲಿ ಯಾವುದೇ ಸಕಾರಾತ್ಮಕ ಕ್ರಮವಹಿಸಿದೇ ಇರುವುದು ಕಂಡುಬಂದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಲೆಕ್ಕಪತ್ರಗಳ ನಿರ್ವಹಣಾ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ Fund Based Accounting System (FBAS) ರೂಪದಲ್ಲಿ ಒಂದು ಪ್ರಯತ್ನವನ್ನು ಮಾಡಿರುವುದಾದರೂ ಇದಕ್ಕೆ ಸರ್ಕಾರದ ಅನುಮೋದನೆ ಪಡೆದಿರುವುದಿಲ್ಲ. ದೇಶದಲ್ಲಿನ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಏಕರೂಪ ಲೆಕ್ಕ ಪದ್ದತಿ ತರುವ ಸಲುವಾಗಿ National Municipal Accounting Manual (NMAM) ಜಾರಿಗೆ ಬಂದಿದ್ದು ಇದನ್ನು ಅನುಸರಿಸಿ ರಾಜ್ಯದಲ್ಲಿ ಕರ್ನಾಟಕ ಮುನಿಸಿಪಲ್ ಆಯವ್ಯಯ ಮತ್ತು ಲೆಕ್ಕಪತ್ರ ನಿಯಮಗಳು 2006 ಜಾರಿಗೆ ಬಂದಿದೆ. ಈ ನಿಯಮಗಳನ್ನು ಸ.ಆ. ಸಂಖ್ಯೆ: ನಅಇ 16 ಸಿಎಆರ್ 2006 ದಿ:03-05-2007 ರನ್ವಯ ಮುಂದಿನ ಆದೇಶ ಹೊರಡಿಸುವವರೆಗೆ ಅಥವಾ ಇದನ್ನು ಆಧರಿಸಿ ಹೊಸ ಪದ್ಧತಿ ಹಾಗೂ ಬಜೆಟ್ ನಿಯಮಗಳನ್ನು ಮಹಾನಗರ ಪಾಲಿಕೆಗಳಿಗೆ ಪ್ರತ್ಯೇಕವಾಗಿ ರೂಪಿಸುವವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ರಾಜ್ಯದ ಉಳಿದ 7 ಮಹಾನಗರ ಪಾಲಿಕೆಗಳಿಗೆ ದಿ:01-04-2006 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಈ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೂ ಅನ್ವಯಿಸುವಂತೆ ಆದೇಶ ಹೊರಡಿಸುವ ಅಥವಾ ಪ್ರತ್ಯೇಕ ನಿಯಮಗಳನ್ನು ರೂಪಿಸಿ ಜಾರಿಗೆ ತರುವ ಅಗತ್ಯತೆ ಇರುತ್ತದೆ.

ಪ್ರಸ್ತುತ ನಿರ್ವಹಿಸುತ್ತಿರುವ ಆಯವ್ಯಯ, ವಾರ್ಷಿಕ ಲೆಕ್ಕಪತ್ರಗಳು, ಲೆಕ್ಕಪತ್ರಗಳ ನಮೂನೆಗಳು, ಹಾಗೂ ನಗದು ಪುಸ್ತಕ ನಮೂನೆಗಳನ್ನು ಪರಿಶೀಲಿಸಿದಾಗ ಕಂಡು ಬಂದ ನ್ಯೂನತೆಗಳು ಈ ಕೆಳಕಂಡಂತಿವೆ.

### 5.3.3 ಲೆಕ್ಕಪತ್ರಗಳ ನಿರ್ವಹಣೆಯಲ್ಲಿನ ನ್ಯೂನ್ಯತೆಗಳು.

ನ್ಯಾಷನಲ್ ಮುನ್ಸಿಪಲ್ ಅಕೌಂಟಿಂಗ್ ಮ್ಯಾನ್ಯೂಯಲ್ ಅಧ್ಯಾಯ 32 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಗಮನಿಸಬೇಕಾದ ಅಂಶಗಳನ್ನು ನೀಡಲಾಗಿದ್ದು, ಈ ಮಾನದಂಡದ ಪ್ರಕಾರ ಬೃ.ಬೆಂ.ಮ.ನ. ಪಾಲಿಕೆಯ ಲೆಕ್ಕಪತ್ರಗಳ ನಿರ್ವಹಣೆಯನ್ನು ಈ ಕೆಳಕಂಡಂತೆ ಮೌಲ್ಯಮಾಪನ ಮಾಡಲಾಗಿದೆ.

i) ಮಹಾನಗರ ಪಾಲಿಕೆಯು ಬ್ಯಾಲೆನ್ಸ್‌ಶೀಟ್ ತಯಾರಿಸಿರುವುದಿಲ್ಲ.

ii) ಆದಾಯ ಮತ್ತು ವೆಚ್ಚಗಳ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳು, ನಗದು ಹರಿವು ಇವುಗಳ ಲೆಕ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯ (Reconcilation) ಮಾಡಿರುವುದಿಲ್ಲ ಇದರಿಂದ ಸ್ವೀಕೃತಿ ಹಾಗೂ ವೆಚ್ಚಗಳ ವಿವರಗಳು ತಾಳೆಯಾಗುವುದಿಲ್ಲ.

iii) ಹಣಕಾಸಿನ ವ್ಯವಹಾರಗಳ ಮೇಲೆ ಸಮರ್ಪಕ ಆಂತರಿಕ ನಿಯಂತ್ರಣ ಇರುವುದಿಲ್ಲ.

### 5.3.4 ಲೆಕ್ಕ ಸಮನ್ವಯ (Reconciliation) ಮಾಡದೆ ಇರುವುದು.

ಮಹಾನಗರ ಪಾಲಿಕೆಗೆ ಆದಾಯ ಮತ್ತು ವೆಚ್ಚದ ಲೆಕ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಲೆಕ್ಕ ಸಮನ್ವಯ (Reconciliation) ಮಾಡಿರುವುದಿಲ್ಲ. ಇದರಿಂದ ನಿಧಿಯಾಧಾರಿತ ಲೆಕ್ಕಗಳು ಮತ್ತು ವಾರ್ಷಿಕ ಲೆಕ್ಕಗಳಿಗೂ, ಬ್ಯಾಂಕ್ ಲೆಕ್ಕಗಳಿಗೂ ಹೊಂದಾಣಿಕೆಯಾಗದೆ ವ್ಯತ್ಯಾಸ ಕಂಡು ಬಂದಿರುತ್ತದೆ. ಬ್ಯಾಂಕ್ ಲೆಕ್ಕಗಳೊಂದಿಗೆ ಲೆಕ್ಕ ಸಮನ್ವಯ (Reconciliation) ಮಾಡದೆ ಇರುವುದರಿಂದ, ನಗಧೀಕರಣವಾಗದ ಹುಂಡಿಗಳು ಇದ್ದಲ್ಲಿ (Receipt) ಅಥವಾ ಕೈ ತಪ್ಪಿನಿಂದ, ಪಾವತಿಸಬೇಕಾದ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಚೆಕ್ಕು ನಗದಾಗಿದ್ದಲ್ಲಿ (Expenditure) ಅವುಗಳು ಬೆಳಕಿಗೆ ಬಾರದೆ ಇರುವ ಸಾಧ್ಯತೆ ಇರುತ್ತದೆ. ಮಹಾನಗರ ಪಾಲಿಕೆಯ ಲೆಕ್ಕ ಸಮನ್ವಯ ಕಾರ್ಯವನ್ನು ಲೆಕ್ಕಪತ್ರ ನಿರ್ವಹಣೆ ಮಾಡುತ್ತಿರುವ ಸಿಬ್ಬಂದಿಯಿಂದ ಮಾಡುವುದು ಅಸಾಧ್ಯವೆಂಬ ಕಾರಣದಿಂದ ಈ ಕಾರ್ಯವನ್ನು ನಿಧಿಯಾಧಾರಿತ ಲೆಕ್ಕ ನಿರ್ವಹಣೆ ಮಾಡುತ್ತಿರುವ ಮೆ॥ ಎಸ್.ಸಿ.ಆರ್, ಕನ್ಸಲ್‌ಟೆಂಟ್ಸ್ ಸಂಸ್ಥೆಗೆ ವಹಿಸಲಾಗಿರುತ್ತದೆ. ಆದರೂ ಲೆಕ್ಕ ಸಮನ್ವಯ ಕಾರ್ಯ ಪ್ರಗತಿಯಾಗಿರುವುದಿಲ್ಲ. ಲೆಕ್ಕಪತ್ರ ನಿರ್ವಹಣೆಯ ಸಮರ್ಪಕತೆಯ ದೃಷ್ಟಿಯಿಂದ ಈ ದಿಸೆಯಲ್ಲಿ ಹೆಚ್ಚಿನ ಗಮನ ನೀಡುವುದು ತೀರಾ ಅಗತ್ಯವಾಗಿರುತ್ತದೆ.

### 5.3.5 ಆದಾಯಗಳ ಸ್ವೀಕೃತಿಯ ಲೆಕ್ಕಗಳನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದು.

ಮಹಾನಗರ ಪಾಲಿಕೆಗೆ ವಿವಿಧ ಆದಾಯ ಮೂಲಗಳಿಂದ ವಿವಿಧ ಕಛೇರಿಗಳಲ್ಲಿ ವಸೂಲಾಗುವ ಮೊತ್ತಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗುತ್ತಿದ್ದು ಅವುಗಳನ್ನು ಮಹಾನಗರ ಪಾಲಿಕೆಯ ಆಯುಕ್ತರ ಹೆಸರಿನಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ನಿರ್ವಹಿಸುವ ಮುಖ್ಯ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲಾಗುತ್ತಿದೆ. ಆದರೆ ಈ ರೀತಿ ವಿವಿಧ ಕಛೇರಿಗಳಲ್ಲಿ ವಸೂಲಾಗುವ ವಿವರವಾಗಲೀ, ಬ್ಯಾಂಕ್ ಖಾತೆಗೆ ಜಮಾ ಆಗಿರುವ ಮತ್ತು ಮುಖ್ಯ ಖಾತೆಗೆ ವರ್ಗಾವಣೆಯಾಗಿರುವ ವಿವರಗಳನ್ನು ಸರಿಯಾದ ಕ್ರಮದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ನಿರ್ವಹಣೆ ಮಾಡಿರುವುದಿಲ್ಲ. ಇದರಿಂದ ಮಹಾನಗರ ಪಾಲಿಕೆಗೆ ವಿವಿಧ ಆದಾಯ ಮೂಲಗಳಿಂದ ಬರುವ ಆದಾಯದ ವಿವರಗಳನ್ನು ನಿಖರವಾಗಿ ವರ್ಗೀಕರಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಸ್ವೀಕೃತಿ ಮೊತ್ತವು ಮುಖ್ಯ ಖಾತೆಗೆ ವರ್ಗಾವಣೆಯಾಗಿರುವುದನ್ನು ಖಚಿತ ಪಡಿಸಿಕೊಳ್ಳಲು ಯಾವುದೇ ಅಧಿಕೃತ ಮಾಹಿತಿ ಇರುವುದಿಲ್ಲ. ಆದ್ದರಿಂದ ನಿಧಿ ಆಧಾರಿತ ಲೆಕ್ಕ ವ್ಯವಸ್ಥೆ (FBAS Accounting Systems) ಆಧಾರದ ಮೇಲೆ ವಿವಿಧ ಕಛೇರಿಗಳಲ್ಲಿ ವಸೂಲಾಗುವ ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮಾ ಆಗಿರುವ ಮತ್ತು ಈ ಮೊತ್ತಗಳು ಮುಖ್ಯ ಖಾತೆಗೆ ವರ್ಗಾವಣೆಯಾಗುವ ವಿವರಗಳನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸುವುದು ಮತ್ತು ಪುಸ್ತಕಗಳ ಲೆಕ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಲೆಕ್ಕ ಸಮನ್ವಯ ಮಾಡುವುದು ತೀರಾ ಅಗತ್ಯವಾಗಿರುತ್ತದೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಅನುಸೂಚಿ (ix) ಭಾಗ-2 ನಿಯಮ 9(2) ಅನ್ವಯ ಮಹಾನಗರ ಪಾಲಿಕೆಯ ವಾರ್ಷಿಕ ಲೆಕ್ಕಗಳನ್ನು, ಅವು ಯಾವ ವರ್ಷಕ್ಕೆ ಸಂಬಂಧಿಸಿವೆಯೋ ಆ ವರ್ಷದ ಮುಂದಿನ ಅಕ್ಟೋಬರ್ ಒಂದನೇ ದಿನಾಂಕದೊಳಗೆ ಲೆಕ್ಕ ಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ. ಅಂದರೆ, 2008-09ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ದಿ:01-10-2009 ರೊಳಗೆ ಲೆಕ್ಕಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ. ಆದರೆ 2008-09ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ದಿ:13-05-2010 ರಂದು ಒದಗಿಸಲಾಗಿರುತ್ತದೆ. ಅಂದರೆ ಎಂಟು ತಿಂಗಳು ವಿಳಂಬವಾಗಿ ವಾರ್ಷಿಕ ಲೆಕ್ಕಗಳನ್ನು ಒದಗಿಸಿರುವುದರಿಂದ ಮಹಾನಗರ ಪಾಲಿಕೆಯ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿ ತಯಾರಿಸುವಲ್ಲಿ ವಿಳಂಬವಾಗಿರುತ್ತದೆ.

ಲೆಕ್ಕ ಪರಿಶೋಧನೆಗೆ ಒದಗಿಸಿರುವ ವಾರ್ಷಿಕ ಲೆಕ್ಕಗಳ ಪ್ರಕಾರ ಮಹಾನಗರ ಪಾಲಿಕೆಯ 2008-09ನೇ ಸಾಲಿನ ಆರ್ಥಿಕ ವಹಿವಾಟು ಈ ಕೆಳಕಂಡಂತೆ ಇರುತ್ತದೆ.

(₹.ಕೋಟಿಗಳಲ್ಲಿ)

| 01-04-2008 ಕ್ಕೆ ಆರಂಭದ ಶಿಲ್ಕು | 2008-09ನೇ ಸಾಲಿನ ಆದಾಯಗಳು | ಒಟ್ಟು ಆದಾಯಗಳು | 2008-09ನೇ ಸಾಲಿನ ವೆಚ್ಚಗಳು | 31-03-2009 ಕ್ಕೆ ಅಂತಿಮ ಶಿಲ್ಕು |
|---|---|---|---|---|
| 346.27 | 2502.55 | 2848.82 | 2430.79 | 418.03 |

## 5.3.6 ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಕಂಡು ಬಂದಿರುವ ಪ್ರಮುಖ ನ್ಯೂನ್ಯತೆಗಳು.

(i) ವಾರ್ಷಿಕ ಲೆಕ್ಕಪತ್ರಗಳಲ್ಲಿ ನಗದಾಗದೆ ಇರುವ ಚೆಕ್ಕಗಳ (Unencashed cheques) ಅಡಿಯಲ್ಲಿ ದಿ:31-03-2009 ಕ್ಕೆ ರೂ.376.35 ಲಕ್ಷ ತೋರಿಸಲಾಗಿದೆ. ಈ ಚೆಕ್ಕುಗಳ ವಿವರಗಳು ಲಭ್ಯವಿರುವುದಿಲ್ಲ.

(ii) ವಾರ್ಷಿಕ ಲೆಕ್ಕಪತ್ರಗಳು 2008-09ನೇ ಸಾಲಿನ ಆದಾಯ ಮತ್ತು ವೆಚ್ಚಗಳ ಲೆಕ್ಕಪತ್ರಗಳೆಂದು ಸಲ್ಲಿಸಲಾಗಿದ್ದು, ಇದರಲ್ಲಿ ಸರ್ಕಾರದ ಪರವಾಗಿ ವಸೂಲಾದ ಸೆಸ್ಸುಗಳು, ವಿವಿಧ ಸಂಸ್ಥೆಗಳಿಂದ ಪಡೆದಿರುವ ಸಾಲಗಳು, ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಆದಾಯ ತೆರಿಗೆ, ಮಾರಾಟ ತೆರಿಗೆ, ರಾಜಧನ, ಮರು ಪಾವತಿ ಮಾಡಬೇಕಾದ ಠೇವಣಿಗಳು ಮುಂತಾದ ಅಮಾನತ್ತು ಲೆಕ್ಕ ಶೀರ್ಷಿಕೆಗಳ ಜಮಾಗಳನ್ನು ಮಹಾನಗರ ಪಾಲಿಕೆಯ ಆದಾಯ ಎಂದು ತೋರಿಸಲಾಗಿದೆ ಮತ್ತು ಮರು ಪಾವತಿ ಮಾಡಬೇಕಾದ ಸಾಲಗಳು, ಠೇವಣಿಗಳು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾದ ಸೆಸ್ಸುಗಳು, ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗೂ ರಾಜಧನ ಇವುಗಳ ಬಾಕಿಗಳ ಲೆಕ್ಕಗಳನ್ನು ತೋರಿಸದೆ ಇರುವುದರಿಂದ ಮಹಾನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿಯ ನೈಜ ಚಿತ್ರಣ ದೊರೆಯುವುದಿಲ್ಲ. ಅಲ್ಲದೇ ಮಹಾನಗರ ಪಾಲಿಕೆಯ ನಿಧಿಯ ಭಾಗವಲ್ಲದ ಋಣ ಶೀರ್ಷಿಕೆ ಲೆಕ್ಕಗಳನ್ನು ಮಹಾನಗರ ಪಾಲಿಕೆಯ ಆದಾಯ, ವೆಚ್ಚಗಳಲ್ಲಿ ಸೇರಿಸಿರುವುದರಿಂದ, ಅವಾಸ್ತವಿಕ ಅಂಕಿ ಅಂಶಗಳನ್ನು ತೋರಿಸಿದಂತಾಗಿರುತ್ತದೆ.

(iii) ಮಹಾನಗರ ಪಾಲಿಕೆಯು ವಿವಿಧ ಸಂಸ್ಥೆಗಳಿಂದ ಪಡೆದಿರುವ ಸಾಲಗಳು, ಅವುಗಳನ್ನು ಮರುಪಾವತಿ ಮಾಡಲು ಸ್ಥಾಪಿಸಿರುವ ಸಿಂಕಿಂಗ್ ಫಂಡ್, ಸಾಲದ ಮೊತ್ತದಿಂದ

ನಿರ್ಮಿಸಲಾಗಿರುವ ಆದಾಯ ತರುವ ಸ್ಥಿರಾಸ್ತಿಗಳು ಇವುಗಳ ವಿವರಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ಪ್ರತಿಬಿಂಬಿಸಿರುವುದಿಲ್ಲ.

(iv) ಲೆಕ್ಕ ಪರಿಶೋಧನೆಗೆ ಒದಗಿಸಿರುವ ವಾರ್ಷಿಕ ಲೆಕ್ಕಪತ್ರಗಳು ಕೇವಲ ಒಂದು ವರ್ಷದ ನಗದು ಆಧಾರಿತ ಆದಾಯ/ವೆಚ್ಚಗಳ ಲೆಕ್ಕಗಳಾಗಿದ್ದು, ಮಹಾನಗರ ಪಾಲಿಕೆಯ ಆರ್ಥಿಕ ಸ್ಥಿತಿಗತಿಗಳನ್ನು ಪ್ರತಿ ಬಿಂಬಿಸುವುದಿಲ್ಲ. ಲೆಕ್ಕ ನಿರ್ವಹಣೆ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದ ಕಲಂ 150(1) ಕ್ಕೆ ಹೊರತಾಗಿರುತ್ತದೆ.

ಈ ನ್ಯೂನ್ಯತೆಗಳಿಂದ ಮಹಾನಗರ ಪಾಲಿಕೆಯ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

### 5.3.7 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಅಂದಾಜು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2008-09ನೇ ಸಾಲಿನ ಆಯವ್ಯಯ ಮತ್ತು 2007-08ನೇ ಸಾಲಿನ ಪರಿಷ್ಕೃತ ಆಯವ್ಯಯವನ್ನು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಹಾಗೂ ಮಹಾನಗರ ಪಾಲಿಕೆ ಪರಿಷತ್ತಿನ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರು ವಿಷಯ ಸಂ.597/07-08 ದಿ:28-03-08 ಹಾಗೂ ವಿಷಯ ಸಂ. 597ಎ/0708 ದಿ:17-04-08ರಲ್ಲಿ ಅನುಮೋದನೆ ನೀಡಿರುವುದಕ್ಕೆ ಸರ್ಕಾರವು ಆದೇಶ ಸಂ.ನಅಇ/110/ ಎಂಎಸ್‌ಯು/2008 ದಿ: 15-05-2008 ರಲ್ಲಿ ಅನುಮೋದನೆ ನೀಡಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದ ಘೋಷ್ವಾರೆ ಪ್ರಕಾರ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತವೆ.

**2007-08**

| | 2006-07ರ ವಾಸ್ತವಿಕ ಲೆಕ್ಕಗಳು | 2007-08ರ ಆಯವ್ಯಯ ಅಂದಾಜುಗಳು | 2007-08ರ ಪರಿಷ್ಕೃತ ಅಂದಾಜುಗಳು |
|---|---|---|---|
| ಆರಂಭಿಕ ಶಿಲ್ಕು | 2114.33 | 7555.14 | 23384.25 |
| ವರಮಾನಗಳು | 121670.92 | 330235.03 | 190020.70 |
| ಒಟ್ಟು | **123785.25** | **337390.17** | **213404.95** |
| ವೆಚ್ಚಗಳು | 116230.11 | 331245.93 | 203597.65 |
| ಅಂತಿಮ ಶಿಲ್ಕು | 7555.14 | 6544.24 | 9807.30 |

**2008-09**

| | 2007-08ರ ವಾಸ್ತವಿಕ ಲೆಕ್ಕಗಳು | 2008-09ರ ಆಯವ್ಯಯ ಅಂದಾಜುಗಳು | 2008-09ರ ಪರಿಷ್ಕೃತ ಅಂದಾಜುಗಳು |
|---|---|---|---|
| ಆರಂಭಿಕ ಶಿಲ್ಕು | 23384.25 | 9807.30 | 34494.55 |
| ವರಮಾನಗಳು | 190020.70 | 284248.29 | 274867.97 |
| ಒಟ್ಟು | **213404.95** | **294055.58** | **309362.52** |
| ವೆಚ್ಚಗಳು | 203597.65 | 291871.31 | 280656.65 |
| ಅಂತಿಮ ಶಿಲ್ಕು | 9807.30 | 2184.27 | 28705.87 |

i) ರಾಜ್ಯದಲ್ಲಿನ 8 ಮಹಾನಗರ ಪಾಲಿಕೆಗಳ ಆಯವ್ಯಯ ಅಂದಾಜುಗಳ ವಿವರಗಳನ್ನು ಅನುಬಂಧ-7 ರಲ್ಲಿ ನೀಡಲಾಗಿದೆ.

ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2008-09ನೇ ಸಾಲಿನ ಆಯವ್ಯಯ ಅಂದಾಜು ಹಾಗೂ ವಾಸ್ತವಿಕ ಲೆಕ್ಕಗಳನ್ನು ಅನುಬಂಧ-8 ರಲ್ಲಿ ನೀಡಲಾಗಿದೆ. ಕೆಲವೊಂದು ಲೆಕ್ಕ ಶೀರ್ಷಿಕೆಗಳ ಅಂದಾಜುಗಳಿಗೂ ವಾಸ್ತವಿಕ ಲೆಕ್ಕಗಳಿಗೂ ವ್ಯತ್ಯಾಸವಿದ್ದು ಇದನ್ನು ಅವಾಸ್ತವಿಕ (Unrealistic) ಆಯವ್ಯಯ ಎಂದು ಲೆಕ್ಕ ಪರಿಶೋಧನೆಯಲ್ಲಿ ಪರಿಗಣಿಸಲಾಗಿದೆ.

iii) ಆಯವ್ಯಯದಲ್ಲಿ ಋಣಶೀರ್ಷಿಕೆಗಳನ್ನು ಪ್ರತ್ಯೇಕವಾಗಿ ತೋರಿಸದೆ, ಮಹಾನಗರ ಪಾಲಿಕೆಯ ನಿಧಿಯ ಭಾಗವೆಂದು ತೋರಿಸಲಾಗಿದೆ. ಋಣ ಶೀರ್ಷಿಕೆಯ ಮೊತ್ತಗಳನ್ನು ಮಹಾನಗರ ಪಾಲಿಕೆಯ ನಿಧಿಯ ಭಾಗವಾಗಿ ಪರಿಗಣಿಸಿರುವುದರಿಂದ ಹಿಗ್ಗಿಸಿದ ಅಂಕಿ ಅಂಶಗಳನ್ನು ತೋರಿಸಿದಂತೆ ಆಗುತ್ತದೆ ಮತ್ತು ವಾಸ್ತವಿಕ ಹಣಕಾಸು ಪರಿಸ್ಥಿತಿಗಿಂತ ವಿಭಿನ್ನ ಚಿತ್ರಣ ನೀಡಿದಂತೆ ಆಗುತ್ತದೆ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಕಲಂ 156 ಅನ್ವಯ ಸಾಲ ಪಡೆಯುವ ಸಂದರ್ಭದಲ್ಲಿ ಈ ಅಂಕಿ ಅಂಶಗಳನ್ನು ನೀಡಿದಲ್ಲಿ ಮಹಾನಗರ ಪಾಲಿಕೆಯ ಮೇಲೆ ಹೆಚ್ಚುವರಿ ದಾಯಿತ್ವ ಸೃಷ್ಟಿಯಾಗುತ್ತದೆ.

iv) ಸರ್ಕಾರದ ಪರವಾಗಿ ಆಸ್ತಿ ತೆರಿಗೆಯ ಜೊತೆಗೆ ವಸೂಲು ಮಾಡುವ ಉಪಕರಗಳಲ್ಲಿ ಭಿಕ್ಷಾಟನೆ ಕರ ಮತ್ತು ಗ್ರಂಥಾಲಯ ಕರಗಳಲ್ಲಿ ಚಾಲ್ತಿ ಸಾಲಿನ ವಸೂಲಾತಿ ಅಂದಾಜು ಮೊತ್ತವನ್ನು ಮಾತ್ರ ಪಾವತಿಸಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. 2007-08ನೇ ಸಾಲಿನ ಅಂತ್ಯಕ್ಕೆ ಭಿಕ್ಷಾಟನೆ ಕರ ₹.2930.22 ಲಕ್ಷ ಹಾಗೂ ಗ್ರಂಥಾಲಯ ಕರ ₹.3312.83 ಲಕ್ಷ ಪಾವತಿಸಲು ಬಾಕಿ ಇದ್ದು, ಇದನ್ನು ಸಂಬಂದಿಸಿದ ಇಲಾಖೆಗಳಿಗೆ ಪಾವತಿಸುವ ಬಗ್ಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ.

v) ಆಯವ್ಯಯದ ಷೆಡ್ಯೂಲ್-ಬಿ ಪ್ರಕಾರ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ 20954 ಎಂದು ತೋರಿಸಲಾಗಿದೆ. ಆದರೆ, ಆಯುಕ್ತರ ಕಛೇರಿಯಿಂದ ನೀಡಲಾಗಿರುವ ಮಂಜೂರಾದ ಹುದ್ದೆಗಳ ವಿವರಗಳನ್ವಯ ಒಟ್ಟು ಮಂಜೂರಾದ ಹುದ್ದೆಗಳು 17958 ಮಾತ್ರ ಇರುತ್ತವೆ. ಈ ರೀತಿ ಸುಮಾರು 3000 ಹೆಚ್ಚುವರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ಆಯವ್ಯಯದಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ ಎಂಬ ಬಗ್ಗೆ ಸೂಕ್ತ ವಿವರ ಇರುವುದಿಲ್ಲ. ಈ ರೀತಿ ಅವಾಸ್ತವಿಕ ಹಾಗೂ ತಪ್ಪು ಅಂಕಿಅಂಶಗಳಿಂದ ಕೂಡಿದ ಆಯವ್ಯಯವನ್ನು ತಯಾರಿಸಿರುವುದು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 167ರಿಂದ 171ರ ಉಲ್ಲಂಘನೆಯಾಗಿರುತ್ತದೆ.

## 5.3.8 ಮಹಾನಗರ ಪಾಲಿಕೆಯು ವಿವಿಧ ಸಂಸ್ಥೆಗಳಿಂದ ಪಡೆದಿರುವ ಸಾಲಗಳು.

ಮಹಾನಗರ ಪಾಲಿಕೆಯು ವಿವಿಧ ಸಂಸ್ಥೆಗಳಿಂದ ಪಡೆಯಲಾಗಿರುವ ಸಾಲದ ಮೊತ್ತದಲ್ಲಿ, ದಿ:31-03-2009 ಕ್ಕೆ ರೂ.1081.28 ಕೋಟಿಗಳು ಮರು ಪಾವತಿಗೆ ಬಾಕಿ ಇರುವುದು ಲೆಕ್ಕ ಪರಿಶೋಧನೆಗೆ ಒದಗಿಸಿರುವ ಅಂಕಿಅಂಶಗಳಿಂದ ಕಂಡು ಬರುತ್ತದೆ. ಸಾಲಗಳನ್ನು ಪಡೆಯುವ ಸಂದರ್ಭದಲ್ಲಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 154 ರಿಂದ 156ನ್ನು ಪಾಲಿಸದಿರುವುದು ಕಂಡು ಬರುತ್ತದೆ.

ಸಾಲದ ಮೊತ್ತವನ್ನು ಮರು ಪಾವತಿ ಮಾಡುವ ಬಗ್ಗೆ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಕಲಂ 160 ರನ್ವಯ ಸಿಂಕಿಂಗ್ ಫಂಡ್ ಸ್ಥಾಪಿಸಿರುವ ಬಗ್ಗೆಯಾಗಲೀ ಅಥವಾ ಮರು ಪಾವತಿ ಬಗ್ಗೆ ಮಾಡಿಕೊಂಡಿರುವ Escrow Account ಬಗ್ಗೆಯಾಗಲೀ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಿರುವುದಿಲ್ಲ.

ಸಾಲ ಮರುಪಾವತಿಗಾಗಿ ಸೂಕ್ತವಾದ ಅವಕಾಶ ಮಾಡದೆ ಇರುವುದರಿಂದ ಮಹಾನಗರ ಪಾಲಿಕೆಯ ಮೇಲೆ ಹೆಚ್ಚಿನ ದಾಯತ್ವಗಳಿಂದಾಗಿ ಮುಂದಿನ ವರ್ಷಗಳಲ್ಲಿ ಪಾಲಿಕೆಯ ಆರ್ಥಿಕ ಪರಿಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದಾಗಿದೆ.

# ಅಧ್ಯಾಯ 6

## ಲೆಕ್ಕಪರಿಶೋಧನಾ ಫಲಿತಾಂಶಗಳು

### 6.1 ಕಾಮಗಾರಿ ಸಂಕೇತ ನೀಡಿಕೆ – ಸರ್ಕಾರದಿಂದ ಮಂಜೂರಾದ ಆಯವ್ಯಯಕ್ಕಿಂತ, ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಲ್ಲಿ ಒದಗಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತಕ್ಕೆ ಕಾಮಗಾರಿ ಸಂಕೇತ ನೀಡಿರುವ ಪ್ರಕರಣಗಳು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ವಹಿಸಲಾದ ಕಾಮಗಾರಿಗಳ ವೆಚ್ಚವನ್ನು ಆಯವ್ಯಯದಲ್ಲಿ ಏರ್ಪಾಟು ಮಾಡಿದ ಅನುದಾನದ ಮಿತಿಯೊಳಗೆ ಪರಿಮಿತಿಗೊಳಿಸುವ ಉದ್ದೇಶದಿಂದ ಹಾಗೂ ಒಂದು ಕಾಮಗಾರಿಗೆ ಎರಡು ಬಾರಿ ಪಾವತಿಯಾಗುವ ಸಾಧ್ಯತೆಗಳನ್ನು ತಡೆಗಟ್ಟುವ ಉದ್ದೇಶದಿಂದ, ಕಾಮಗಾರಿಗಳಿಗೆ ಸಂಕೇತ ನೀಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಆದರೆ ಈ ಪದ್ಧತಿಯಂತೆ ಕಾಮಗಾರಿಗಳಿಗೆ ಸಂಕೇತ ನೀಡುವಲ್ಲಿ ಅನೇಕ ಲೋಪದೋಷಗಳು ಕಂಡುಬಂದಿದ್ದು, ಕಾಮಗಾರಿ ಸಂಕೇತ ನೀಡಿರುವುದಕ್ಕೆ ಸಂಬಂಧಿಸಿದಂತೆ ವಿಶೇಷ ಲೆಕ್ಕತನಿಖೆಯನ್ನು 2009–10ನೇ ಸಾಲಿನಲ್ಲಿ ಕೈಗೊಳ್ಳಲಾಯಿತು. ಲೆಕ್ಕಪರಿಶೋಧನೆ ವೇಳೆ ಕಾಮಗಾರಿ ಸಂಕೇತ ನೀಡಲಾಗಿರುವುದಕ್ಕೆ ಸಂಬಂಧಿಸಿದಂತೆ ಮುಖ್ಯ ಆರ್ಥಿಕ ಅಧಿಕಾರಿ/ಮುಖ್ಯ ಲೆಕ್ಕಾಧಿಕಾರಿಗಳವರ ಕಛೇರಿಯಲ್ಲಿ ಅಗತ್ಯ ದಾಖಲೆಗಳನ್ನು ನಿರ್ವಹಿಸದೇ ಇದ್ದುದರಿಂದ ಎಲ್ಲಾ ಕಾಮಗಾರಿ ವಿಭಾಗಗಳಿಂದ ಮಾಹಿತಿ ತರಿಸಿಕೊಂಡು ಪರಿಶೀಲನೆ ಮಾಡಿ ವರದಿ ತಯಾರಿಸಲಾಗಿದೆ.

ಆಯವ್ಯಯದಲ್ಲಿ ಒದಗಿಸಿರುವ ಅನುದಾನಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಿರುವ ಕೆಲವು ಲೆಕ್ಕ ಶೀರ್ಷಿಕೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(₹.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ಆಯವ್ಯಯ ಅಂದಾಜು | ಕಾಮಗಾರಿ ಸಂಕೇತ ನೀಡಿರುವುದು | ಹೆಚ್ಚುವರಿ |
|---|---|---|---|---|
| 1 | Works sanctioned by Worshipful Mayor | 1000.00 | 1675.45 | 675.45 |
| 2 | Emergency Reserve Fund | 5000.00 | 21768.89 | 16768.89 |
| 3 | Mv & R Stalls, Shops & Complex's | 300.00 | 372.72 | 72.72 |
| 4 | Maintanance & Management of Parks | 700.00 | 877.57 | 177.57 |
| 5 | Landscape, Development of parks, Medians and Baule wards & cinds | 800.00 | 7291.57 | 6491.57 |
| | **Total** | **7800.00** | **31486.20** | **24186.20** |

ಇವು ಕೆಲವು ಉದಾಹರಣೆಗಳಾಗಿದ್ದು, ಇಂಥಹ ಅನೇಕ ಪ್ರಕರಣಗಳು ಇರುತ್ತವೆ. ಇವುಗಳನ್ನು ಯಾವರೀತಿ ಕ್ರಮಬದ್ಧಗೊಳಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಕೋರಿ ನೀಡಿರುವ ಲೆಕ್ಕಪರಿಶೋಧನಾ ವಿಚಾರಣೆಗೆ ನೀಡಿರುವ ಉತ್ತರ ಸಮಂಜಸವಾಗಿರುವುದಿಲ್ಲ.

## 6.2 ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡುವ ಪದ್ಧತಿ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡುವ ಪದ್ಧತಿಯು ಆರ್ಥಿಕ ಶಿಸ್ತನ್ನು ತರುವ ನಿಟ್ಟಿನಲ್ಲಿ ಹಾಗೂ ಸಂಭವನೀಯ ಅಪವ್ಯಯಗಳನ್ನು ತಪ್ಪಿಸಲು ನೆರವಾಗುತ್ತದೆ.

ಕಾಮಗಾರಿಗಳಿಗೆ ಸಂಕೇತ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಮುಖ್ಯ ಉದ್ದೇಶಗಳು ಈ ಮುಂದಿನಂತಿರುತ್ತವೆ.

1) ತಾಂತ್ರಿಕ ಅಂಶಗಳು ಮತ್ತು ಹಣಕಾಸು ಅಂಕಿಅಂಶಗಳ ಬಗ್ಗೆ ಒಂದೇ ಕಡತದಲ್ಲಿ ಮಾಹಿತಿ ಲಭ್ಯವಾಗುವಂತೆ ನಿರ್ವಹಿಸುವುದು.
2) ಕಾಮಗಾರಿಗೆ ಸಂಬಂಧಿಸಿದಂತೆ ಒಂದೇ ಕೆಲಸಕ್ಕೆ ಎರಡು ಸಲ ಪಾವತಿಯಾಗುವುದನ್ನು ಮತ್ತು ಅಧಿಕೃತವಲ್ಲದ ಕಾಮಗಾರಿಯನ್ನು ಪತ್ತೆ ಹಚ್ಚುವಲ್ಲಿ ನೆರವಾಗುವುದು.
3) ಕಾಮಗಾರಿಗಳಿಗೆ ಸಂಕೇತ ನೀಡುವ ವ್ಯವಸ್ಥೆ ಜಾರಿಯಲ್ಲಿರುವುದರಿಂದ ಆಯವ್ಯಯದಲ್ಲಿ ಸಂಬಂಧಿಸಿದ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಅನುದಾನದ ಪ್ರಮಾಣವನ್ನು ಆಧರಿಸಿ ಕಾಮಗಾರಿ ಕೈಗೊಳ್ಳಲು ನೆರವಾಗುವ ಅಂಶವಾಗಿರುತ್ತದೆ.
4) ಕಾಮಗಾರಿಗಳಿಗೆ ಆಡಳಿತ, ತಾಂತ್ರಿಕ ಅನುಮೋದನೆ, ಆರ್ಥಿಕ ಅಂಶಗಳ ವಿವರಗಳು ಹಾಗೂ ಗುತ್ತಿಗೆ ಟೆಂಡರಿಗೆ ಸಂಬಂಧಿಸಿದ ಎಲ್ಲಾ ಪೂರ್ಣ ಮಾಹಿತಿಯು ಒಂದೇ ಕಡತದಲ್ಲಿ ಲಭ್ಯವಾಗುವುದರಿಂದ ಕಾಮಗಾರಿಯ ಲೋಪದೋಷಕ್ಕೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳಲು ಅನುಕೂಲವಾಗುತ್ತದೆ.
5) ಕಾಮಗಾರಿ ಸಂಕೇತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದರಿಂದ ಆರ್ಥಿಕ ವರ್ಷವೊಂದರಲ್ಲಿ ಯಾವುದೇ ಕಾಮಗಾರಿಯು ಪುನರಾವರ್ತನೆಯಾಗುವುದನ್ನು ನಿಖರವಾಗಿ ಪತ್ತೆಹಚ್ಚಬಹುದಾಗಿರುತ್ತದೆ.
6) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿವಿಧ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ ಆರ್ಥಿಕ ಶಿಸ್ತನ್ನು ತರುವ ಸಲುವಾಗಿ ಕಾಮಗಾರಿಗಳಿಗೆ ಸಂಕೇತ ನೀಡುವ ವ್ಯವಸ್ಥೆಯು ಜಾರಿಯಲ್ಲಿದ್ದು, ಕಾಮಗಾರಿಯ ಸಂಕೇತದ ಅವಧಿಯು 1 ವರ್ಷದ್ದಾಗಿರುತ್ತದೆ.

## 6.3 ಕಾಮಗಾರಿ ಸಂಕೇತ ನೀಡಿರುವುದಕ್ಕೆ ಪೂರ್ಣಮಾಹಿತಿಯ ದಾಖಲಾತಿಗಳನ್ನು ನಿರ್ವಹಿಸದೆ ಇರುವುದು.

2009-10 ನೇ ಸಾಲಿನಲ್ಲಿ ಕಾಮಗಾರಿ ಸಂಕೇತ ನೀಡುವ ಕಾರ್ಯವನ್ನು ಈ ಕೆಳಕಂಡ ಅಧಿಕಾರಿಗಳಿಗೆ ವಹಿಸಲಾಗಿರುತ್ತದೆ.

| ಕ್ರಮ ಸಂ. | ಕಾರ್ಯ ನಿರ್ವಹಿಸಿದ ಅಧಿಕಾರಿಗಳ ಹೆಸರು | ಅವಧಿ | |
|---|---|---|---|
| | | ರಿಂದ | ವರೆಗೆ |
| 1 | ಮುಖ್ಯ ಆರ್ಥಿಕ ಅಧಿಕಾರಿಗಳು, ಜೆ.ಎನ್.ಎನ್.ಯು.ಆರ್.ಎಂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 01-04-2009 | 08-11-2009 |
| 2 | ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 09-11-2009 | 31-03-2010 |

ಅ) ಮುಖ್ಯ ಆರ್ಥಿಕ ಅಧಿಕಾರಿಗಳ (ಜೆ.ಎನ್.ಎನ್.ಯು.ಆರ್.ಎಂ) ಕಛೇರಿಯಲ್ಲಿ ಕಾಮಗಾರಿ ಸಂಕೇತ ನೀಡಿರುವ ಅವಧಿಗೆ ಸಂಬಂಧಿಸಿದಂತೆ, ಸದರಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಹಾಯಕ ನಿಯಂತ್ರಕರುಗಳಿಗೆ ಕಾಮಗಾರಿ ಸಂಕೇತ ನೀಡುವ ಕಾರ್ಯವಹಿಸಿದ್ದು, ಅವರುಗಳು ಯಾವುದೇ ರಿಜಿಸ್ಟರ್, ಕಡತ, ಅಥವಾ ಸಂಕೇತ ನೀಡಲು ಅನುಮೋದನೆ ಪಡೆದ ಆದೇಶದ ಪ್ರತಿ ಮುಂತಾದ ಯಾವುದೇ ದಾಖಲಾತಿಗಳನ್ನು ನಿರ್ವಹಿಸಿರುವುದಿಲ್ಲ. ಕಾಮಗಾರಿ ಸಂಕೇತ ನೀಡಿರುವ ವಿವರಗಳನ್ನು ಮಾತ್ರ ಗಣಕ ಯಂತ್ರದಲ್ಲಿ ದಾಖಲಿಸಿದ್ದು ಅವುಗಳ ಪ್ರತಿಗಳನ್ನು ಮಾತ್ರ ಲೆಕ್ಕಪರಿಶೋಧನೆಗೆ ಒದಗಿಸಲಾಗಿದೆ. ಇದರಿಂದಾಗಿ ಆಯವ್ಯಯದ ಪ್ರತಿ ಲೆಕ್ಕ ಶೀರ್ಷಿಕೆ/ಪಿ ಕೋಡ್ ಎದುರಾಗಿ ನೀಡಿರುವ ಸಂಕೇತದ ಮಾಹಿತಿ, ಕಾಮಗಾರಿ ಸಂಕೇತ ನೀಡಲು ಇರುವ ಅನುದಾನದ ಲಭ್ಯತೆಯನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಕಾಮಗಾರಿ ಸಂಕೇತ ನೀಡಲು ಸಮರ್ಪಕ ಆಯವ್ಯಯ ಅನುದಾನದ ಅವಕಾಶಗಳನ್ನು ನಿಯಂತ್ರಿಸಲು ಸಾಧ್ಯವಾಗಿರುವುದಿಲ್ಲ. ಪೂರ್ಣ ಪ್ರಮಾಣದ ದಾಖಲಾತಿಗಳನ್ನು ನಿರ್ವಹಿಸದೆ ಕಾಮಗಾರಿ ಸಂಕೇತ ನೀಡಿರುವುದು ಗಂಭೀರ ಸ್ವರೂಪದ ಲೋಪವಾಗಿರುತ್ತದೆ.

ಆ) ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಕಾಮಗಾರಿ ಸಂಕೇತ ನೀಡುವ ಕಾರ್ಯವನ್ನು ಉಪ ನಿಯಂತ್ರಕರು (ಹಣಕಾಸು) ನಿರ್ವಹಿಸಿರುತ್ತಾರೆ. ಈ ಅವಧಿಯಲ್ಲಿ ಕಾಮಗಾರಿ ಸಂಕೇತ ನೀಡುವ ವಹಿ ಹಾಗೂ ಸಂಕೇತ ನೀಡಲು ಮಂಜೂರಾತಿ ಪಡೆದಿರುವ ಆದೇಶದ ಪ್ರತಿಗಳನ್ನು ನಿರ್ವಹಿಸಿರುತ್ತಾರೆ. ಆದರೆ, ಆಯವ್ಯಯದಲ್ಲಿ ಅನುದಾನದ ಲಭ್ಯತೆ ಇದೆಯೇ ಇಲ್ಲವೇ ಎಂಬ ಬಗ್ಗೆ ಪೂರ್ಣ ಮಾಹಿತಿಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೆ ಕಾಮಗಾರಿ ಸಂಕೇತ ನೀಡಲಾಗಿದೆ.

## 6.4 ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಪ್ರಕಾರ ಅನುಮೋದಿತ ಆಯವ್ಯಯದ ಅನುದಾನ ಮೀರಿ ಕಾಮಗಾರಿ ಕೈಗೊಳ್ಳಲು ಅವಕಾಶವಿಲ್ಲದಿದ್ದರೂ ಕಾಮಗಾರಿ ಮಂಜೂರು ಮಾಡಿರುವುದು.

ಆಯವ್ಯಯದಲ್ಲಿ ಏರ್ಪಾಟು ಮಾಡಿದ ಅನುದಾನದ ಎದುರು ವೆಚ್ಚವನ್ನು ನಿಯಂತ್ರಿಸುವ ಬಗ್ಗೆ ಮತ್ತು ಕಾಮಗಾರಿಗಳಿಗೆ ಎರಡು ಬಾರಿ ಬಿಲ್ಲು ಪಾವತಿಯಾಗುವ ಸಾಧ್ಯತೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾಮಗಾರಿ ಸಂಕೇತ ನೀಡುವ ಪದ್ಧತಿ ಜಾರಿಗೊಳಿಸಲಾಗಿದೆ. ಆದರೆ, 2009-10ನೇ

ಸಾಲಿನಲ್ಲಿ ಕೈಗೊಂಡ ವಿಶೇಷ ಲೆಕ್ಕಪರಿಶೋಧನೆಗೆ ಮಹಾನಗರ ಪಾಲಿಕೆಯ ಕಾಮಗಾರಿ ವಿಭಾಗಗಳು ಸಲ್ಲಿಸಿರುವ ಮಾಹಿತಿಯ ಪ್ರಕಾರ ಆಯವ್ಯಯದ ಅನೇಕ ಲೆಕ್ಕ ಶೀರ್ಷಿಕೆಗಳಲ್ಲಿ ಒದಗಿಸಿದ ಅನುದಾನ ಮೀರಿ ಹೆಚ್ಚುವರಿಯಾಗಿ ಒಟ್ಟು ₹.218418.16 ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಲಾಗಿದೆ.

ಅನುದಾನ ಮೀರಿ ಹೆಚ್ಚುವರಿಯಾಗಿ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಿರುವುದರಿಂದ ಆಗಿರುವ ಪರಿಣಾಮಗಳು ಈ ಕೆಳಕಂಡಂತಿರುತ್ತವೆ.

i) ಕಾಮಗಾರಿಗಳ ಕಾರ್ಯಕ್ರಮ ಪಟ್ಟಿಯಲ್ಲಿ Programme Of Works (POW) ಸೇರಿರದ ಹೆಚ್ಚುವರಿ ಕಾಮಗಾರಿಗಳಿಗೆ ಸಂಕೇತ ನೀಡಲು ಪ್ರಸ್ತಾವನೆಗಳು ಕಾರ್ಯಪಾಲಕ ಅಭಿಯಂತರರು/ತೋಟಗಾರಿಕೆ ಅಧೀಕ್ಷಕರುಗಳಿಂದ ಮುಖ್ಯ ಅಭಿಯಂತರರು ಮತ್ತು ವಲಯ ಅಪರ/ಜಂಟಿ ಆಯುಕ್ತರಿಂದ ವಿಶೇಷ ಆಯುಕ್ತರು ಯೋಜನೆ ಮುಖಾಂತರ, ಕೆಲವು ಸಂದರ್ಭಗಳಲ್ಲಿ ನೇರವಾಗಿ ಆಯುಕ್ತರಿಗೆ ಕಳುಹಿಸಲಾಗಿದೆ. ಈ ಪ್ರಸ್ತಾವನೆಗಳಲ್ಲಿ ಎಲ್ಲಿಯೂ ಆಯವ್ಯಯದಲ್ಲಿನ ಅನುದಾನ ಲಭ್ಯ ಇರುವ ಬಗ್ಗೆ ಪ್ರಸ್ತಾಪ ಇರುವುದಿಲ್ಲ.

ii) ಆಯುಕ್ತರಿಂದ ಕಾಮಗಾರಿ ಸಂಕೇತ ನೀಡಲು ಅನುಮೋದನೆಯಾದ ಕಡತಗಳು ಸಂಕೇತ ನೀಡುವ ಬಗ್ಗೆ ಮುಖ್ಯ ಆರ್ಥಿಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲ್ಪಡುತ್ತವೆ. ಆದರೆ ಕೆಲವು ಕಡತಗಳಲ್ಲಿ ಮುಖ್ಯ ಆರ್ಥಿಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಆಯವ್ಯಯದ ಅವಕಾಶ, ಕಾಮಗಾರಿ ಸಂಕೇತ ನೀಡಲಾಗಿರುವ ಮೊತ್ತ, ಉಳಿಕೆ ಅಥವಾ ಹೆಚ್ಚುವರಿ ಬಗ್ಗೆ ಆಯುಕ್ತರ ಗಮನಕ್ಕೆ ಪುನಃ ಕಡತವನ್ನು ಮಂಡಿಸದೆ, ತಮ್ಮ ಮಟ್ಟದಲ್ಲೆ ಆಯವ್ಯಯದ ಅವಕಾಶಕ್ಕಿಂತ ಅಧಿಕವಾಗಿದ್ದರೂ ಸಂಕೇತ ನೀಡಿರುತ್ತಾರೆ. ಇದರಿಂದಾಗಿ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮಿತಿಯಲ್ಲಿ ವೆಚ್ಚ ನಿಯಂತ್ರಿಸುವುದು ಸಾಧ್ಯವಾಗಿರುವುದಿಲ್ಲ.

iii) ಸಹಾಯಕ ನಿಯಂತ್ರಕರು (JNNURM) ಮತ್ತು ಉಪ ನಿಯಂತ್ರಕರು (ಹಣಕಾಸು) ಇವರುಗಳು ಮೇಲಾಧಿಕಾರಿಗಳಿಗೆ ಆರ್ಥಿಕ ಪರಿಸ್ಥಿತಿ ಮತ್ತು ಆಯವ್ಯಯದ ಅವಕಾಶಗಳ ಬಗ್ಗೆ ಮಾಹಿತಿ ನೀಡದೆ ಮತ್ತು ಕೆಲವು ಸಂದರ್ಭಗಳಲ್ಲಿ ಮೇಲಾಧಿಕಾರಿಗಳ ಆದೇಶಗಳನ್ನು ತಪ್ಪಾಗಿ ಅರ್ಥೈಸಿ ಮುಖ್ಯ ಆರ್ಥಿಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳ ಗಮನಕ್ಕೂ ತರದೆ ಸಂಕೇತ ನೀಡಿರುವುದರಿಂದ ಮಹಾನಗರ ಪಾಲಿಕೆಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿರುತ್ತದೆ.

iv) ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 170 (1)ರ ಅನ್ವಯ ನಗರ ಪಾಲಿಕೆಯ ಕೌನ್ಸಿಲ್ ಪಾಸು ಮಾಡಿ ಸಲ್ಲಿಸಲಾದ ಆಯವ್ಯಯವನ್ನು ಸರ್ಕಾರವು ಯಥಾವತ್ತಾಗಿ ಅಥವಾ ತಾನು ಇಚ್ಛಿಸಿದಂತೆ ಭಾಗಶ: ಮಾರ್ಪಾಡಿನೊಂದಿಗೆ ಮಂಜೂರಾತಿ ನೀಡಬಹುದಾಗಿದೆ. ಕಲಂ 172ನ್ನು ಉಲ್ಲಂಘಿಸಿ ಆಯವ್ಯಯದಲ್ಲಿ ಒದಗಿಸಲಾದ ಅವಕಾಶಕ್ಕಿಂತ ಅಧಿಕ ಮೊತ್ತದ ಕಾಮಗಾರಿಗಳಿಗೆ ಕಾಮಗಾರಿ ಸಂಕೇತ ನೀಡಿರುವುದರಿಂದ ಮಹಾನಗರ ಪಾಲಿಕೆಯ ಆರ್ಥಿಕ ಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮವಾಗಿ ಪಾಲಿಕೆಯ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ.

v) ಈ ರೀತಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ (ಲೆಕ್ಕ ಶೀರ್ಷಿಕೆಗಳಲ್ಲಿನ) ಪರಿಮಿತಿಯನ್ನು ಗಮನಿಸದೆ ಕಾಮಗಾರಿ ಸಂಕೇತ ನೀಡಿ, ಸರ್ಕಾರದಿಂದ ಅನುಮೋದನೆಯಾದ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮೊತ್ತವನ್ನು ಕಡೆಗಣಿಸಿರುವುದರಿಂದ ಮಹಾನಗರ ಪಾಲಿಕೆಯ ಆರ್ಥಿಕ ಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮವಾಗಿರುವುದು ಮತ್ತು ಆರ್ಥಿಕ ಶಿಸ್ತು ಹಾಗೂ ನಿಯಮಗಳ ಉಲ್ಲಂಘನೆ ಆಗಿರುವುದು ಕಂಡು ಬಂದಿರುತ್ತದೆ.

ಬಿಲ್ಲು ಪಾವತಿ ವಿವರ : ಘಟಕ ವರದಿಯ ವಿವರದಂತೆ ಒಟ್ಟು ₹.8,18,32,000-00

ಸದರಿ ಟೆಂಡರಿನಲ್ಲಿ ₹. 1250.00 ಲಕ್ಷಗಳ ಮೂಲ ಅಂದಾಜಿಗೆ ಟೆಂಡರುದಾರನ ದರಗಳು ಶೇ 54 ರಷ್ಟು ಹೆಚ್ಚಿನ ಟೆಂಡರು ಪ್ರೀಮಿಯಂ ಒಳಗೊಂಡಿರುತ್ತದೆ ಮತ್ತು ಮಾರುಕಟ್ಟೆ ದರ ಹೋಲಿಸಿ ಶೇ 9.84 ರಷ್ಟು ಟಿ.ಪಿ ಇರುತ್ತದೆಂದು ತಿಳಿಸಿರುತ್ತಾರೆ. ಇಲ್ಲಿ ಟೆಂಡರು ತುಲನೆಗೆ ಮಾರುಕಟ್ಟೆ ದರಗಳ ರೀತ್ಯಾ ₹.1757-00 ಲಕ್ಷಗಳನ್ನು ಮಾರುಕಟ್ಟೆ ಮೌಲ್ಯವಾಗಿ ಪರಿಗಣಿಸಿದೆ. ಆದರೆ ಈ ಮಾರುಕಟ್ಟೆ ದರಗಳನ್ನು ಯಾವ ರೀತಿಯ ಲೆಕ್ಕಾಚಾರ/ದಾಖಲೆಗಳಿಂದ ಪಡೆಯಲಾಗಿರುತ್ತದೆ ಎಂಬುದರ ಪೂರ್ಣ ವಿವರ ನೀಡಿರುವುದಿಲ್ಲ ಮತ್ತು ಮಾರುಕಟ್ಟೆ ದರಗಳಿಗೆ ಟೆಂಡರ್ ತುಲನೆ ಮಾಡುವಾಗ ಕನ್ಸಲ್‌ಟೆನ್ಸಿ ಚಾರ್ಜ್ ₹.1,25,000-00 ಬ್ಯಾಂಕ್ ಗ್ಯಾರಂಟಿ ಚಾರ್ಜ್ ₹.50,00,000.00 ಹಾಗೂ ಕ್ವಾಲಿಟಿ ಕಂಟ್ರೋಲ್ ಚಾರ್ಜ್₹.16,59,063.00 ಒಟ್ಟು ₹.97,84,063.00 ಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ. ಮೇಲ್ಕಂಡ ಯಾವುದೇ ಅಂಶಗಳು ಕಾಮಗಾರಿ ನಿರ್ವಹಣೆಯ ನೇರ ಭಾಗಗಳಾಗಿರುವುದಿಲ್ಲ. ಆದರೆ ಈ ಮೊಬಲಗನ್ನು ಯಾವ ನಿಯಮಗಳಡಿಯಲ್ಲಿ ಮಾರುಕಟ್ಟೆ ದರ ಲೆಕ್ಕಾಚಾರ ಮಾಡಲು ಸೇರಿಸಿಕೊಳ್ಳಲಾಗಿತ್ತು ಎಂಬುದಕ್ಕೆ ಸಮರ್ಥನೀಯ ವಿವರಣೆ ಇರುವುದಿಲ್ಲ. ಮೂಲ ಟೆಂಡರ್‌ಗೆ ಸರ್ಕಾರದ ಸುತ್ತೋಲೆ ರೀತ್ಯಾ ಶೇ 10 ರೊಳಗೆ ಇರುವಂತೆ ತೋರಿಸಲು ಇವುಗಳನ್ನು ಸೇರಿಸಿರಬಹುದಾಗಿರುತ್ತದೆ. ಕನ್ಸಲ್‌ಟೆನ್ಸಿ ಚಾರ್ಜ್‌ನ್ನು ಪಾಲಿಕೆಯೇ ಭರಿಸುತ್ತಿದೆ. ಬ್ಯಾಂಕ್ ಗ್ಯಾರಂಟಿಯು ಟೆಂಡರು ಷರತ್ತಿನ ಭಾಗವಾಗಿರುತ್ತದೆ. ಮೇಲ್ಕಂಡ ಲೆಕ್ಕಾಚಾರಗಳನ್ನು ಪರಿಶೀಲಿಸಿದಾಗ ಕಾಲ್ಪನಿಕ ಮಾರುಕಟ್ಟೆ ದರಗಳನ್ನು ಸೃಷ್ಟಿಸಿ ಟೆಂಡರ್ ಪ್ರೀಮಿಯಂ ಮೊತ್ತವನ್ನು ತಗ್ಗಿಸಿ ಗುತ್ತಿಗೆದಾರನಿಗೆ ಅನುಕೂಲ ಮಾಡಿಕೊಡಲಾಗಿದೆ.

## 6.13 ಟೆಂಡರ್ ನಿಯಮಗಳನ್ನು ಪಾಲಿಸುವಲ್ಲಿ ಆದ ಲೋಪದೋಷಗಳಿಂದಾಗಿ ಗುತ್ತಿಗೆದಾರರಿಗೆ ಪರೋಕ್ಷ ಲಾಭ ಮಾಡಿಕೊಟ್ಟು, ಪಾಲಿಕೆಗೆ ನಷ್ಟವುಂಟು ಮಾಡಿರುವುದು.

ಮಹಾನಗರ ಪಾಲಿಕೆಯ JNNURM ವಿಭಾಗದಲ್ಲಿ ಮಲ್ಲೇಶ್ವರಂ ಅಂಡರ್ ಪಾಸ್ ನಿರ್ಮಾಣ ಕಾಮಗಾರಿಗೆ ತಯಾರಿಸಲಾದ ಅಂದಾಜು ಪಟ್ಟಿಯ ಅಂದಾಜು ಮೊತ್ತ ₹.12,50,05,418-00 ಗಳಾಗಿದ್ದು ವಿವರ ಕೆಳಕಂಡಂತಿರುತ್ತದೆ.

(ರೂ.ಗಳಲ್ಲಿ)

| | | |
|---|---|---|
| ಕಾಮಗಾರಿಗಾಗಿ | | 10,91,60,356 |
| ಶೇ.3 ರ Contingencies | | 32,74,811 |
| ಒಟ್ಟು ಮೊತ್ತ. | | 11,24,35,167 |
| 1% Work Establishment Charges | 11,24,352 | 22,48,704 |
| 1% Quality Control charges | 11,24,352 | |
| | | 11,46,83,871 |
| ಶೇ.9 ರ Agency charges | | 1,03,21,548 |
| **ಒಟ್ಟು ಮೊತ್ತ** | | **12,50,05,419** |

ಮೇಲ್ಕಂಡ ಕಾಮಗಾರಿಯನ್ನು ಟರ್ನ್‌ಕೀ ಪದ್ಧತಿಯಲ್ಲಿ ಟೆಂಡರು ಮುಖಾಂತರ ನಿರ್ವಹಿಸಲಾಗಿದ್ದು ಸದರಿ ಕಾಮಗಾರಿಗೆ ತಯಾರಿಸಿದ್ದ ಅಂದಾಜು ಪಟ್ಟಿಯಲ್ಲಿ ಶೇ 9 ರಷ್ಟು ಏಜೆನ್ಸಿ ಚಾರ್ಜ್ ಎಂದು ಸೇರ್ಪಡೆ ಮಾಡಿರುವುದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಪ್ಯಾರಾ 132(ಎ) ಗೆ ವ್ಯತಿರಿಕ್ತವಾಗಿರುತ್ತದೆ.

(ಕೇಂದ್ರ ಸರ್ಕಾರದ ಕಾಮಗಾರಿಗಳನ್ನು ರಾಜ್ಯ ಸರ್ಕಾರದ ಮೂಲಕ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಬಳಸಿ ಕೈಗೊಂಡಾಗ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಶೇ.9 ರಷ್ಟು ಏಜೆನ್ಸಿ ಚಾರ್ಜಸ್ ಪಾವತಿಸುವ ಪದ್ಧತಿ ಇದೆ).

ಅಂದಾಜು ಮೊಬಲಗು ₹.12,50,05,419.00 ಗಳಲ್ಲಿ ಕಾಮಗಾರಿಯ ಮೊತ್ತವಾದ ₹.10,91,60,356.00ಗಳನ್ನು ಮಾತ್ರ ಟೆಂಡರ್ ತುಲನೆಗೆ ಪರಿಗಣಿಸಬೇಕಾಗಿರುತ್ತದೆ. ಇದುಗಂಟಿನ ಮೊಬಲಗುಗಳಾದ "ಕಂಟೆನ್‌ಜೆನ್ಸಿ," "ವರ್ಕ್ ಚಾರ್ಜಡ್ ಎಸ್ಟಾಬ್ಲಿಶ್‌ಮೆಂಟ್" ಮತ್ತು "ಗುಣ ನಿಯಂತ್ರಣ" ವೆಚ್ಚಗಳು ಗುತ್ತಿಗೆಯ ಭಾಗವಾಗಿರುವುದಿಲ್ಲ. ಆದರೆ ಸ್ವೀಕರಿಸಲಾದ ಟೆಂಡರ್‌ನ ತುಲನೆ ಮಾಡಲು ₹.10,91,60,356.00ಗಳ ಬದಲಾಗಿ ₹.12,50,05,419.00ಗಳನ್ನು ಪರಿಗಣಿಸಿ ಟೆಂಡರ್ ಪ್ರೀಮಿಯಂ ಅನ್ನು ಶೇ.31.33 ಎಂದು ನಿರ್ಧರಿಸಿ ₹.16,41,60,000.00 ಗುತ್ತಿಗೆ ಮೊಬಲಗಿಗೆ ಅನುಮೋದನೆ ಮಾಡಲಾಗಿದೆ.

ಈ ಕ್ರಮವು ಕೆ.ಪಿ.ಡಬ್ಲ್ಯೂ.ಎ ಕೋಡ್ ಪ್ಯಾರಾ 262ಕ್ಕೆ ವ್ಯತಿರಿಕ್ತವಾಗಿರುತ್ತದೆ ಅನುಮೋದಿತ ಟೆಂಡರ್ ದರ ಶೇ.31.33 ಅನ್ನು ಅಂದಾಜಿನಲ್ಲಿರುವ ಕಾಮಗಾರಿಯ ಮೊಬಲಗು ₹.10,91,60,356.00ಗಳಿಗೆ ಮಾತ್ರ ತುಲನೆ ಮಾಡಿದ್ದಲ್ಲಿ ಗುತ್ತಿಗೆ ಮೊತ್ತವು ರೂ.14,33,60,295.00ಗಳಿಗೆ ಮಾತ್ರ ತುಲನೆ ಮಾಡಿದ್ದಲ್ಲಿ ಗುತ್ತಿಗೆ ಮೊತ್ತವು ₹.14,33,60,295.00 ಗಳಾಗಬೇಕಿರುತ್ತದೆ. ಆದರೆ ₹.16,41,60,000.00ಗಳಿಗೆ ಅನುಮೋದಿಸಲಾಗಿರುತ್ತದೆ.

ಇದರಿಂದಾಗಿ ಗುತ್ತಿಗೆದಾರನಿಗೆ ₹.2,07,99,705.00ಗಳನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿದೆ. ಟೆಂಡರ್ ನಿಯಮಗಳನ್ನು ಪಾಲಿಸುವಲ್ಲಿ ಆದ ಲೋಪದೋಷದಿಂದಾಗಿ ಪಾಲಿಕೆಗೆ ₹.2,07,99,705.00ಗಳ ನಷ್ಟವುಂಟಾಗಿರುತ್ತದೆ.

## 6.14 ಮೊಬಿಲೈಜೇಷನ್ (Mobilization) ಮುಂಗಡ ₹.1,31,98,000/- ಪಾವತಿ ಮಾಡಿರುವುದು ಮತ್ತು ಕಾಮಗಾರಿಯನ್ನು ರದ್ದುಗೊಳಿಸಲಾಗಿದ್ದರೂ ಮುಂಗಡವನ್ನು ವಸೂಲಿ ಮಾಡದಿರುವುದು.

ಮಹಾನಗರ ಪಾಲಿಕೆಯ JNNURM ವಿಭಾಗದಲ್ಲಿ ಕೈಗೊಂಡಿರುವ ನಾಗವಾರ ಜಂಕ್ಷನ್ನಿನಲ್ಲಿ under pass ನಿರ್ಮಾಣ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ನಂತರ ಕಾರ್ಯಾದೇಶ ನೀಡಿ ಕರಾರು ಪತ್ರದ ಪ್ರಕಾರ ಮೊಬಿಲೈಜೇಷನ್ ಮುಂಗಡ ಪಾವತಿಸಿದ ನಂತರ ಕಾಮಗಾರಿ ನಿರ್ವಹಿಸುವ ಸ್ಥಳದಲ್ಲಿ ಭೂಮಿಯೊಳಗೆ 7.5ಮೀಟರಿನಿಂದ 8 ಮೀಟರಿನಲ್ಲಿ ಅಂತರ್ಜಲ ಹೇರಳವಾಗಿದ್ದು ಇಲ್ಲಿ under pass ನಿರ್ಮಾಣ ಮಾಡುವುದು ಕಷ್ಟಕರವೆಂದು, ಒಂದು ಪಕ್ಷ ಬದಲೀ ತಂತ್ರಜ್ಞಾನದ ಮೂಲಕ ನಿರ್ಮಾಣ ಮಾಡಿದ್ದಾಗ್ಯೂ ಕೂಡ ಸಂಗ್ರಹವಾಗುವ ನೀರನ್ನು ಪ್ರತಿ ನಿತ್ಯ ಹೊರಹಾಕುವುದು ಕಷ್ಟಕರವಾದುದೆಂದು ಕಾಮಗಾರಿ ಸಮಲೋಚಕರು ವರದಿ ನೀಡಿರುತ್ತಾರೆ.

ಏತನ್ಮಧ್ಯೆ, ಸದರಿ ಪ್ರದೇಶವು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು ಬಿ.ಡಿ.ಎ ಹೊರ ವರ್ತುಲ ರಸ್ತೆ ನಿರ್ಮಿಸಲು ತಯಾರಿ ನಡೆಸುತ್ತಿರುವ ಹಿನ್ನಲೆಯಲ್ಲಿ ಕಾಮಗಾರಿಯನ್ನು ಕೈ ಬಿಡುವ ಆಯುಕ್ತರ ದಿನಾಂಕ 22-10-09 ರ ಟಿಪ್ಪಣಿಗೆ ಆಡಳಿತಾಧಿಕಾರಿಗಳು ದಿನಾಂಕ: 24-10-2009 ರಲ್ಲಿ ಅನುಮೋದಿಸಿದ್ದು, ದಿನಾಂಕ 25-11-2009 ರಲ್ಲಿ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಿ ಟೆಂಡರು ಕರೆಯುವ ಮೊದಲು ಈ ಕಾಮಗಾರಿಯ ತಾಂತ್ರಿಕ ಅರ್ಹತೆ ಬಗ್ಗೆ (Work Feasibility) ಪರಿಶೀಲನೆ ಮಾಡಿ M/s Manasa constructions ರವರು ಸಲ್ಲಿಸಿದ್ದು ನಂತರ ಅವರೇ ಕಾಮಗಾರಿ ನಿರ್ವಹಣೆಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯ ನೀಡಿರುತ್ತಾರೆ.

ಕಡತದಲ್ಲಿರುವ ಮಾಹಿತಿಯಂತೆ ಮೊಬಿಲೈಜೇಶನ್ ಮುಂಗಡ ಹಣವನ್ನು ಹಿಂತಿರುಗಿಸಲು ಗುತ್ತಿಗೆದಾರರನ್ನು ಕೋರಿದಾಗ ಅವರು ನ್ಯಾಯಾಂಗದ ಮೊರೆ ಹೋಗಿದ್ದು ನ್ಯಾಯಾಲಯದಲ್ಲಿ ಮುಂಗಡ ಹಣವನ್ನು ವಾಪಸ್ಸು ನೀಡಲು ಆದೇಶವಾಗಿದೆಯೆಂಬುದಾಗಿ ಆಯುಕ್ತರು ತಿಳಿಸಿರುತ್ತಾರೆ.

ಪಾವತಿಸಿದ ಮುಂಗಡಕ್ಕೆ ₹.1,31,98,000-00 ಮೌಲ್ಯದ ಬ್ಯಾಂಕ್ ಗ್ಯಾರಂಟಿಯನ್ನು ಪಡೆಯಲಾಗಿದ್ದು ಅವುಗಳ ವಾಯಿದೆ ದಿನಾಂಕ 17-3-2009 ರವರೆಗೆ ಇದ್ದಿತ್ತು. ಮುಖ್ಯ ಹಣಕಾಸು ಅಧಿಕಾರಿಗಳು ದಿನಾಂಕ 17-2-2009 ಮತ್ತು 24-11-2009 ರಲ್ಲಿ ವ್ಯವಸ್ಥಾಪಕರು ಪಂಜಾಬ್ ನ್ಯಾಷನಲ್ ಬ್ಯಾಂಕ್ ಬಂಜಾರ ಹಿಲ್ಸ್ ಹೈದರಾಬಾದ್ ರವರಿಗೆ ಪತ್ರವನ್ನು ಬರೆದು ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಿ ಡಿ.ಡಿ ಕಳುಹಿಸಲು ಕೋರಿರುತ್ತಾರೆ. ಆದರೆ ಲೆಕ್ಕ ತನಿಖೆ ವೇಳೆಗೆ ನಗದೀಕರಣವಾದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ.

ಮೇಲ್ಕಂಡ ಕಾಮಗಾರಿಯಲ್ಲಿ ಲೋಕೋಪಯೋಗಿ ಇಲಾಖೆ ಸಂಹಿತೆ ಸಂಪುಟ-1 ರ ಪುಟ 125(ಎ) ಅನ್ವಯ ಅಸಮರ್ಪಕ ಸ್ಥಳ ಪರಿಶೀಲನೆಯಿಂದಾಗಿ ಹಾಗೂ ತದನಂತರದ ತೀರ್ಮಾನಗಳಿಂದಾಗಿ ಪಾಲಿಕೆಯ ₹.1,31,98,000/-ಗಳು ಅನಾವಶ್ಯಕ ಪಾವತಿಯಾಗಿ ಸಂಪನ್ಮೂಲದ ಸದ್ಬಳಕೆ ಆಗಿರುವುದಿಲ್ಲ, ಅಲ್ಲದೇ ಸಮಾಲೋಚಕರಿಗೆ ಪಾವತಿಸಿದ ಸಮಾಲೋಚನಾ ವೆಚ್ಚವೂ ಕೂಡ ವ್ಯರ್ಥ ವೆಚ್ಚವಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

## 6.15 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ವಿನಾಯಿತಿ ಪಡೆದ ಉದ್ದೇಶ ಸಫಲವಾಗದಿರುವುದು ಮತ್ತು ದೋಷಪೂರಿತ ಅಂದಾಜು ತಯಾರಿಕೆ.

ಮಹಾನಗರ ಪಾಲಿಕೆಯ JNNURM ವಿಭಾಗದಲ್ಲಿ Construction of By Pass water Drain for Primary Drain K-200 Koramangala Valley Central Silk Board Junction

ಕಾಮಗಾರಿಯನ್ನು ₹.230.00 ಲಕ್ಷಗಳ ಅಂದಾಜಿನಲ್ಲಿ ಕೈಗೊಳ್ಳಲು ಹಾಗೂ ತುರ್ತು ಕಾಮಗಾರಿಯಾದ್ದರಿಂದ ಕೆ.ಟಿ.ಪಿ.ಪಿ ಕಾಯ್ದೆ 1999 ರ ಕಲಂ 4(ಜಿ) ಅನ್ವಯ ವಿನಾಯಿತಿ ಪಡೆದು

ನೇರ ಗುತ್ತಿಗೆ ಮೂಲಕ ನಿರ್ವಹಿಸಲಾಗಿದೆ. ಸದರಿ ಕಾಮಗಾರಿಯ ಕಡತಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

i) ಕೆ.ಟಿ.ಪಿ.ಪಿ. ಕಾಯ್ದೆ 1999ರ ಕಲಂ 4(ಜಿ)ಅನ್ವಯ ವಿನಾಯಿತಿ ಪಡೆಯುವುದಕ್ಕೂ ಮೊದಲು ಟೆಂಡರ್ ಕರೆದಿರುವುದಾಗಿ ಕಡತದ ಕಛೇರಿ ಟಿಪ್ಪಣಿ ಕಂಡಿಕೆ 5 ರಲ್ಲಿ ನಮೂದು ಮಾಡಲಾಗಿದ್ದರೂ ಸದರಿ ಟೆಂಡರ್ ಏಕೆ ರದ್ದುಗೊಳಿಸಲಾಯಿತು ಎಂಬ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಇರುವುದಿಲ್ಲ.

ii) ಕಾಮಗಾರಿ ಅಂದಾಜು ₹.230.00 ಲಕ್ಷಗಳು ಎಂದು ತಿಳಿಸಿ ಸರ್ಕಾರದ ಪತ್ರ ಸಂಖ್ಯೆ/ನ.ಅ.ಇ.545:ಎಂ.ಎಸ್.ವೈ.2007 ದಿನಾಂಕ:13.09.2007 ರಲ್ಲಿ ಅನುಬಂಧದ ಕ್ರಮ ಸಂಖ್ಯೆ 11 ರಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಆದರೆ ಅನುಮೋದನೆ ಆದ ನಂತರ ಅಂದಾಜಿನ ಮೊತ್ತವನ್ನು ₹.307.60 ಲಕ್ಷಗಳಿಗೆ ಹೆಚ್ಚಿಸಿ ₹.305.95 ಲಕ್ಷಗಳಿಗೆ ಕಾಮಗಾರಿಯನ್ನು ನೇರಗುತ್ತಿಗೆ ಮೂಲಕ ವಹಿಸಿಕೊಡಲಾಗಿದೆ. ಈ ರೀತಿ ಹೆಚ್ಚುವರಿಯಾಗಿ ಸೇರಿಸಲ್ಪಟ್ಟ ₹.77.60 ಲಕ್ಷಗಳಿಗೆ ಸರ್ಕಾರದ ಅನುಮೋದನೆ ಇರುವುದಿಲ್ಲ.

iii) ಮೇಲ್ಕಂಡ ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು 90 ದಿನಗಳೊಳಗಾಗಿ ಪೂರ್ಣಗೊಳಿಸಲು (25.09.2008ಕ್ಕೆ) ನೇರಗುತ್ತಿಗೆ ಮೂಲಕ ಕಾಮಗಾರಿ ವಹಿಸಿಕೊಟ್ಟಿದ್ದು ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ಲೆಕ್ಕ ತನಿಖೆಯನ್ನು ಕೈಗೊಂಡ ಸಮಯದಲ್ಲೂ (31.03.2010) ಯಾವುದೇ ಮಾಹಿತಿ ಲಭ್ಯವಿಲ್ಲ. ಇದರಿಂದಾಗಿ ತುರ್ತು ಕಾಮಗಾರಿಯೆಂದು ಸರ್ಕಾರದಿಂದ ಕೆ.ಟಿ.ಪಿ.ಪಿ ನಿಯಮದಂತೆ ವಿನಾಯಿತಿಯನ್ನು ಪಡೆದಿರುವ ಉದ್ದೇಶ ಸಫಲವಾಗಿರುವುದಿಲ.

iv) ಗುತ್ತಿಗೆಯನ್ನು ವಹಿಸಿಕೊಡುವ ಪೂರ್ವದಲ್ಲಿ ಗುತ್ತಿಗೆದಾರರ ಸಾಮರ್ಥ್ಯದ ಅನುಭವ, ಆರ್ಥಿಕ ಹಿನ್ನೆಲೆ ಹಾಗೂ ಲಭ್ಯವಿರುವ ಯಂತ್ರ ಸಾಮಾಗ್ರಿ ಇವುಗಳನ್ನು ಪರಿಗಣಿಸದೆ. ಆಲೋಚನಾರಹಿತವಾಗಿ (Arbitrary) ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ.

v) ಸದರಿ ಕಾಮಗಾರಿಯ ಅಂದಾಜನ್ನು ಪರಿಶೀಲಿಸಿದಾಗ ಅಂದಾಜಿನಲ್ಲಿ ಈ ಕೆಳಕಂಡ ಐಟಂಗಳ ಪರಿಮಾಣವನ್ನು ತಪ್ಪುಗುಣಕಾರದಿಂದ ₹.28,34,474/- ಗಳನ್ನು ಅಂದಾಜಿನಲ್ಲಿ ಹೆಚ್ಚಿಸಲಾಗಿದೆ.

(₹.ಲಕ್ಷಗಳಲ್ಲಿ)

| ಕ್ರ. ಸಂ. | ಪುಟ ಸಂಖ್ಯೆ | ಕೆಲಸದ ವಿವರಗಳು | | ಪರಿಮಾಣ | ದರ | ಮೊತ್ತ |
|---|---|---|---|---|---|---|
| 1 | 7 | Poly urea liming inside pipe | | 3318.00 ಚ.ಮೀ | 1225 | 40.65 |
| | | Poly urea liming inside pipe 2x165=330x3.142x1.60=1658.97 | | 1658.97 ಚ.ಮೀ | 1225 | 20.32 |
| | | **ಹೆಚ್ಚುವರಿ ಸೇರ್ಪಡೆ** | (ಎ) | 1659.03 ಚ.ಮೀ | 1225 | **20.32** |
| 2 | 12 | ಎಸ್.ಎಸ್. ಎಂ. ನಿರ್ಮಾಣಕ್ಕಾಗಿ | | 344 ಘ.ಮೀ | 3044.44 | 10.47 |
| | | ಎಸ್.ಎಸ್. ಎಂ. ನಿರ್ಮಾಣಕ್ಕಾಗಿ | | 180 ಘ.ಮೀ | 3044.44 | 5.48 |
| | | **ಹೆಚ್ಚುವರಿ ಸೇರ್ಪಡೆ** | (ಬಿ) | 164 ಘ.ಮೀ | 3044.44 | **4.99** |
| 3 | | ಗುತ್ತಿಗೆದಾರರೊಡನೆ ಮಾಡಿ ಕೊಂಡಿರುವ ಅಂದಾಜು ಮೌಲ್ಯ 3,02,87,476.00 ಈ ಮೊತ್ತದ ಮೇಲೆ ಶೇ 1 ರ ಕಾರ್ಮಿಕ ಕಲ್ಯಾಣ ಉಪಕರ | (ಸಿ) | | | 3.03 |
| | | **ಒಟ್ಟು ಮೊತ್ತ** (ಎ+ಬಿ+ಸಿ) | | | | **28.34** |

ಮೇಲ್ಕಂಡಂತೆ ಗುತ್ತಿಗೆದಾರರೊಡನೆ ಮಾಡಿಕೊಂಡಿರುವ ಕರಾರಿನಂತೆ ಅಂದಾಜು ಮೊತ್ತಕ್ಕೆ ಹೆಚ್ಚುವರಿ ಮೊತ್ತ ₹.28.34 ಲಕ್ಷಗಳನ್ನು ಸೇರಿಸಿರುವುದರಿಂದ ಗುತ್ತಿಗೆದಾರ ಸಂಸ್ಥೆಗೆ ಅನುಕೂಲ ಮಾಡಿ, ಮಹಾನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟುಮಾಡುವ ಉದ್ದೇಶವಿದೆಯೆಂದು ಮತ್ತು ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ನೀಡಿದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯ ನಿಯಮಕ್ಕೆ ನೀಡಿದ ವಿನಾಯಿತಿಯನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆಯೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

# ಅಧ್ಯಾಯ-7

## 7.1 ದಾವಣಗೆರೆ ಮಹಾನಗರ ಪಾಲಿಕೆ.

**ಅ) ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿರುವ ತೆರಿಗೆಗಳನ್ನು ಸರ್ಕಾರಕ್ಕೆ ಜಮಾ ಮಾಡದಿರುವುದು.**

2007-08ನೇ ಸಾಲಿನಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯು ಕಾಮಗಾರಿಗಳನ್ನು ನಿರ್ವಹಿಸುವಾಗ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ತೆರಿಗೆಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಪೂರ್ಣವಾಗಿ ಜಮಾ ಮಾಡದಿರುವುದು.
ಈ ಕೆಳಕಂಡ ಅಂಕಿಅಂಶಗಳಿಂದ ಕಂಡು ಬರುತ್ತದೆ.

(₹..ಲಕ್ಷಗಳಲ್ಲಿ)

| ಕ್ರ. ಸಂ. | ತೆರಿಗೆಗಳ ವಿವರಗಳು | ದಿನಾಂಕ: 1-04-2007 ಪ್ರಾರಂಭಿಕ ಶಿಲ್ಕು | 2007-08ನೇ ಸಾಲಿನಲ್ಲಿ ವಸೂಲಿ | ಒಟ್ಟು ಮೊತ್ತ | 2007-08 ರಲ್ಲಿ ಸರ್ಕಾರಕ್ಕೆ ಜಮೆ | 31-03-2008 ಅಂತ್ಯಕ್ಕೆ ಉಳಿದ ಶಿಲ್ಕು |
|---|---|---|---|---|---|---|
| 1 | ಆದಾಯ ತೆರಿಗೆ | 6.97 | 13.16 | 20.13 | 13.16 | 6.97 |
| 2 | ಮಾರಾಟ ತೆರಿಗೆ | 24.22 | 35.37 | 59.59 | 35.37 | 24.22 |
| 3 | ರಾಜಧನ | 16.30 | 09.07 | 25.37 | 9.07 | 16.30 |
| 4 | ಕ್ಷೇಮ ನಿಧಿ | – | 0.34 | 0.34 | 0.34 | – |
| | **ಒಟ್ಟು** | **47.49** | **57.94** | **105.43** | **57.94** | **47.49** |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಿದಾಗ ಕೇಂದ್ರ ಸರ್ಕಾರಕ್ಕೆ ಆದಾಯ ತೆರಿಗೆ ₹.6.97 ಲಕ್ಷಗಳನ್ನು ಹಾಗೂ ರಾಜ್ಯದ ಸಂಚಿತ ನಿಧಿಗೆ ₹.40.52 ಲಕ್ಷಗಳನ್ನು ಜಮಾ ಮಾಡದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

**ಆ) ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿ/ನೌಕರರ ಪಿಂಚಣಿ ವಂತಿಕೆ, ಸರ್ಕಾರಕ್ಕೆ ಜಮಾ ಮಾಡದಿರುವುದು.**

2007-08ನೇ ಸಾಲಿನಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸಿರುವ ಅಧಿಕಾರಿ/ನೌಕರರ ಪಿಂಚಣಿ ವಂತಿಕೆಯನ್ನು ಕೆ.ಸಿ.ಎಸ್.ಆರ್ ನಿಯಮ 427 ಸರ್ಕಾರದ ಆದೇಶ ಸಂಖ್ಯೆ: FD19 SRS 1988 ದಿ:25-5-1988 ಸರ್ಕಾರಿ ಆದೇಶದೊಂದಿಗೆ ಓದಿಕೊಂಡಂತೆ ಸರ್ಕಾರದ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮಾ ಮಾಡದಿರುವುದು ಕಂಡು ಬಂದಿದೆ.

**ಇ) ತೆರಿಗೆ, ಬಾಡಿಗೆ ಇತ್ಯಾದಿಗಳನ್ನು ನಿಯಮಿತವಾಗಿ ವಸೂಲಿ ಮಾಡದಿರುವುದು.**

ದಾವಣಗೆರೆ ಮಹಾನಗರ ಪಾಲಿಕೆಯು 2007-08ನೇ ಸಾಲಿನಲ್ಲಿ ವಾರ್ಷಿಕ ಬಾಡಿಗೆ ಆಧಾರಿತ ಮನೆ ಕಂದಾಯ, ಸ್ವಯಂ ಘೋಷಿತ ಆಸ್ತಿ ತೆರಿಗೆ, ನೀರಿನ ದರ, ಪಾಲಿಕೆಯ ಮಳಿಗೆಗಳ ಬಾಡಿಗೆ ಮತ್ತು ಸಂತೆ ಹರಾಜು ಶುಲ್ಕ, ಒಟ್ಟು ವಸೂಲಿ ಮಾಡಬೇಕಾದ ಬೇಡಿಕೆಯ ಮೊತ್ತ ₹.1101.10

ಲಕ್ಷಗಳಲ್ಲಿ ₹.773.02 ಲಕ್ಷಗಳನ್ನು ಮಾತ್ರ [illegible]ದ್ದು ರೂ.328.08 ಲಕ್ಷಗಳ ಬಾಕಿ ವಸೂಲಿ ಮಾಡಬೇಕಾಗಿದೆ. ಪ್ರತಿ ಆರ್ಥಿಕ ವರ್ಷದಲ್ಲಿ ಬೇಡಿಕೆಗನುಗುಣವಾಗಿ ತೆರಿಗೆ/ಶುಲ್ಕಗಳನ್ನು ವಸೂಲಿ ಮಾಡದಿದ್ದಲ್ಲಿ ಪಾಲಿಕೆಯ ಆರ್ಥಿಕಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ.

ವಿವರ ಕೆಳಕಂಡಂತಿದೆ.

(₹..ಲಕ್ಷಗಳಲ್ಲಿ)

| ಕ್ರ ಸಂ. | ವಿವರಗಳು | 01-04-07ರ ಆರಂಭದ ಶಿಲ್ಕು | 2007-08 ಬೇಡಿಕೆ | ಒಟ್ಟು | 2007-08ರಲ್ಲಿ ವಸೂಲಿ | 31-3-09 ಅಂತಿಮ ಶಿಲ್ಕು ವಸೂಲಿಗಳು |
|---|---|---|---|---|---|---|
| 1 | ವಾರ್ಷಿಕ ಬಾಡಿಗೆ ಆಧಾರಿತ ಮನೆ ಕಂದಾಯ | 185.31 | * | 185.31 | 16.00 | 169.31 |
| 2 | ಸ್ವಯಂ ಘೋಷಿತ ಆಸ್ತಿ ತೆರಿಗೆ | – | 568.74 | 568.74 | 568.74 | – |
| 3 | ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ | – | 22.04 | 22.04 | 22.04 | – |
| 4 | ಮಳಿಗೆ ಬಾಡಿಗೆ | 6.34 | 37.79 | 44.13 | 39.75 | 4.38 |
| 5 | ನೀರಿನ ದರ | 87.44 | 184.77 | 272.21 | 121.50 | 150.71 |
| 6 | ಸಂತೆ ಹರಾಜು ಶುಲ್ಕ | 8.67 | – | 8.67 | 4.99 | 3.68 |
| | ಒಟ್ಟು | **287.76** | **813.34** | **1101.10** | **773.02** | **328.08** |

(* ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದಿದೆ).

**ಈ) ದಾವಣಗೆರೆ ನಿರ್ಮಿತಿ ಕೇಂದ್ರ ಮತ್ತು ಕರ್ನಾಟಕ ಭೂ ಸೇನಾ ನಿಗಮಕ್ಕೆ (ಈಗಿನ ಕೆಆರ್‌ಐಡಿಎಲ್) ನಿರ್ವಹಿಸಿದ ಕಾಮಗಾರಿಗಳಲ್ಲಿ ಕಂಡು ಬಂದ ನ್ಯೂನತೆಗಳು ಮತ್ತು ರೂ.37.48 ಲಕ್ಷ ವಸೂಲಿ ಮಾಡುವ ಕುರಿತು.**

i) ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ಅಂದಾಜು ಪಟ್ಟಿಯಂತೆ ಪಾವತಿಸದೇ 2006-07ನೇ ಸಾಲಿನ ದರ ಪಟ್ಟಿಯಂತೆ ಪಾವತಿ ಮಾಡಿದ್ದು ಲೆಕ್ಕಪರಿಶೋಧನೆಗೆ ಯಾವುದೇ ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಟೆಂಡರ್ ಪ್ರಕ್ರಿಯೆಯಿಲ್ಲದೆ, ನಿರ್ಮಿತಿ ಕೇಂದ್ರ ತಯಾರಿಸಿದ ಅಂದಾಜು ಪಟ್ಟಿಗಳನ್ನು ಪರಿಶೀಲಿಸದೆ ಆಡಳಿತಾತ್ಮಕ ಅನುಮೋದನೆ ಪಡೆಯದೆ, ದರಪಟ್ಟಿಯ ದರಕ್ಕಿಂತ ಹೆಚ್ಚಿಗೆ ಪಾವತಿಸಿ ಪಾಲಿಕೆಗೆ ₹.7.36 ಲಕ್ಷಗಳ ನಷ್ಟವನ್ನುಂಟು ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ.

ii) ಈ ಕೆಳಕಂಡ ಕಾಮಗಾರಿಗಳ ಪಟ್ಟಿಯಲ್ಲಿನ ಕ್ರಮ ಸಂಖ್ಯೆ 2 ಮತ್ತು 4 ರಲ್ಲಿರುವ ಮೊತ್ತಗಳನ್ನು ನಿರ್ಮಿತಿ ಕೇಂದ್ರ ಮತ್ತು ಭೂಸೇನಾ ನಿಗಮಕ್ಕೆ ಪಾವತಿಸಿರುವುದನ್ನು ಶಿವಮೊಗ್ಗ ವೃತ್ತದ ದರಪಟ್ಟಿಯೊಂದಿಗೆ ಪರಿಶೀಲಿಸಲಾಗಿ, ರಾಜಧನ, ಆದಾಯ ತೆರಿಗೆ ಮತ್ತು ಗುತ್ತಿಗೆದಾರರ ಲಾಭಾಂಶ ಮತ್ತು ಇತರೆ ವೆಚ್ಚಗಳನ್ನು ಒಳಗೊಂಡ ದರಗಳನ್ನು ನಿಗದಿಪಡಿಸಿದ್ದರೂ ಅಂದಾಜು ಪಟ್ಟಿಗಳಲ್ಲಿ ಪ್ರತ್ಯೇಕವಾಗಿ ತೆರಿಗೆ ಮತ್ತು ಇತರೆ ವೆಚ್ಚಗಳನ್ನು ಸೇರಿಸಿ ಹೆಚ್ಚುವರಿಯಾಗಿ ₹.17.77 ಮತ್ತು ₹.19.71 ಲಕ್ಷಗಳನ್ನು ಪಾವತಿಸಿರುತ್ತಾರೆ. ಇದರಿಂದ ಪಾಲಿಕೆಗೆ ಒಟ್ಟು ₹.37.48 ಲಕ್ಷಗಳ ಆರ್ಥಿಕ ನಷ್ಟ ಉಂಟಾಗಿದ್ದು ನಿರ್ಮಿತಿ ಕೇಂದ್ರದಿಂದ, ₹.17.77 ಲಕ್ಷಗಳು, ಭೂ ಸೇನಾ ನಿಗಮದಿಂದ ₹.19.71 ಲಕ್ಷಗಳು ಒಟ್ಟು ₹.37.48 ಲಕ್ಷಗಳನ್ನು ವಸೂಲಿ ಮಾಡಿ ಪಾಲಿಕೆಗೆ ಜಮೆ ಮಾಡಿಕೊಳ್ಳ ಬೇಕಾಗಿದೆ. ವಿವರಗಳು ಕೆಳಕಂಡಂತಿವೆ.

(₹. ಲಕ್ಷಗಳಲ್ಲಿ)

| ಕ್ರ ಸಂ. | ಸಂಸ್ಥೆಯ ಹೆಸರು/ ಕಾಮಗಾರಿ ವಿವರ | ಪಾವತಿಸಿದ ಮೊತ್ತ | ಪಾವತಿ ಮೊತ್ತ ಬೇಕಾದ ಮೊತ್ತ | ವಸೂಲಿ ಮಾಡಬೇಕಾದ ಮೊತ್ತ |
|---|---|---|---|---|
| 1 | ವ್ಯವಸ್ಥಾಪಕ ನಿರ್ದೇಶಕರು ನಿರ್ಮಿತಿ ಕೇಂದ್ರ, ದಾವಣಗೆರೆ. | 70.90 | 63.54 | 7.36 |
| 2 | ವ್ಯವಸ್ಥಾಪಕ ನಿರ್ದೇಶಕರು ನಿರ್ಮಿತಿ ಕೇಂದ್ರ, ದಾವಣಗೆರೆ. | 77.19 | 66.78 | 10.41 |
| 3 | ಸಹಾಯಕ ನಿರ್ದೇಶಕರು ಭೂ ಸೇನಾ ನಿಗಮ, ದಾವಣಗೆರೆ. | 174.34 | 174.34 | – |
| 4 | ಸಹಾಯಕ ನಿರ್ದೇಶಕರು ಭೂ ಸೇನಾ ನಿಗಮ, ದಾವಣಗೆರೆ. | 125.26 | 105.55 | 19.71 |
| | ಒಟ್ಟು | **447.69** | **410.21** | **37.48** |

## 7.2 ಬಳ್ಳಾರಿ ಮಹಾನಗರ ಪಾಲಿಕೆ (2008-09).

**ಅ) ಕಟ್ಟಡಗಳ ಮೇಲೆ ಘನತ್ಯಾಜ್ಯ ವಸ್ತು ವಿಲೇವಾರಿ ಉಪಕರವನ್ನು ವಸೂಲಿ ಮಾಡದೆ ಇರುವುದು.**

ಬಳ್ಳಾರಿ ನಗರ ಪಾಲಿಕೆಯು ಸರ್ಕಾರದ ಅಧಿಸೂಚನೆ ಸಂಖ್ಯೆ.ಯುಡಿಡಿ 65 ಎಂಎಲ್‌ಯು 2002. ದಿನಾಂಕ:22/2/2004 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಅನುಸೂಚಿ (III) ತೆರಿಗೆಗಳ ನಿಯಮಗಳ 19(ಎ) ಪ್ರಕಾರ ಕಟ್ಟಡಗಳ ಮೇಲೆ ಘನತ್ಯಾಜ್ಯ ವಿಲೇವಾರಿ ಉಪಕರವನ್ನು ವಿಧಿಸಬೇಕಾಗಿದ್ದು 2005-06ನೇ ಸಾಲಿನಿಂದ ಈ ಉಪಕರವನ್ನು ವಿಧಿಸಿ ವಸೂಲಿಸದೇ ಇರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿದೆ. ಇದೇ ರೀತಿ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಮಗಳ ಮೇಲೆ ಘನತ್ಯಾಜ್ಯ ಉಪಕರ ವಸೂಲಿ ಮಾಡದೆ ಇರುವುದರಿಂದ 2008-09ನೇ ಸಾಲಿನಲ್ಲಿ ಅಂದಾಜು ₹.27.76 ಲಕ್ಷ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಹಾಗೂ ಒಟ್ಟು ಆಸ್ತಿಗಳ ಮೇಲೆ ಘನತ್ಯಾಜ್ಯ ಉಪಕರ ವಿಧಿಸಿ ವಸೂಲಿ ಮಾಡಿದರೆ ವಾರ್ಷಿಕ ಕನಿಷ್ಟ ₹.55.52 ಲಕ್ಷಗಳ ಆದಾಯ ಪಡೆಯಬಹುದಾಗಿದೆ. ಇದರಿಂದ ಪಾಲಿಕೆಯು ಆರ್ಥಿಕ ಸಂಪನ್ಮೂಲ ಕ್ರೋಢಿಕರಿಸುವುದರಲ್ಲಿ ವಿಫಲವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

**ಆ) ಕುಸಿದು ಬಿದ್ದ ಕಟ್ಟಡದ ಅವಶೇಷಗಳನ್ನು ತೆರವುಗೊಳಿಸಲು ಪಾಲಿಕೆಯು ಭರಿಸಿದ ವೆಚ್ಚ ₹.26.15 ಲಕ್ಷಗಳನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡದಿರುವುದು.**

ಬಳ್ಳಾರಿಯಲ್ಲಿ ಕುಸಿದು ಬಿದ್ದ ಕಟ್ಟಡದ ಅವಶೇಷಗಳನ್ನು ಪಾಲಿಕೆಯ ವತಿಯಿಂದ ತೆರವುಗೊಳಿಸಲು ಪಾವತಿಸಿದ ಮೊತ್ತ ₹.26.15 ಲಕ್ಷಗಳನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡದೇ ಇರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಅಧಿನಿಯಮದ ಕಲಂ 322 ಮತ್ತು 470 ಪ್ರಕಾರ ನೋಟಿಸು ಜಾರಿಮಾಡಿ ಈ ಮೊತ್ತವನ್ನು ಕಟ್ಟಡದ ಮಾಲೀಕರಿಂದ ₹.26.15 ಲಕ್ಷಗಳನ್ನು ವಸೂಲು ಮಾಡಲು ಅಗತ್ಯ ಕ್ರಮ ಜರುಗಿಸಬೇಕಾಗಿರುತ್ತದೆ.

ಇ) **ಬಾಕಿ ಇರುವ ನೀರಿನ ದರದ ಮೊತ್ತ ₹.488.22 ಲಕ್ಷಗಳು**

ನಗರ ಪಾಲಿಕೆಯು ನಾಗರೀಕರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು ಆದ್ಯ ಕರ್ತವ್ಯವಾಗಿದ್ದು ಕುಡಿಯುವ ನೀರಿನ ಸೌಲಭ್ಯ ಇದರಲ್ಲಿ ಪ್ರಾಮುಖ್ಯತೆಯನ್ನು ಪಡೆದು ಕೊಂಡಿದೆ. ಈ ಕೆಳಗಿನ ಬೇಡಿಕೆ ವಸೂಲಾತಿ ಅಂಕಿಅಂಶಗಳನ್ನು ಪರಿಶೀಲಿಸಿದಾಗ ಪಾಲಿಕೆ ಶೇ.37 ರಷ್ಟು ನೀರಿನ ಶುಲ್ಕ ವಸೂಲಿ ಮಾಡಿದ್ದು ಬಾಕಿ ಶೇ.63 ರಷ್ಟು ಶುಲ್ಕ ವಸೂಲಿ ಮಾಡದೇ ಇರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿದೆ.

(₹. ಲಕ್ಷಗಳಲ್ಲಿ)

| ನಿಗದಿಪಡಿಸಿದರುವ ಮಾಸಿಕ ನೀರಿನ ದರ | ದಿ:01-04-2009 ರ ಪ್ರಾರಂಭಿಕ ಶಿಲ್ಕು | 2009-10ನೇ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ವಸೂಲು ಮಾಡಿದ ಮೊತ್ತ | ಬಾಕಿ | ಬಾಕಿ ಶೇಕಡ |
|---|---|---|---|---|---|---|
| ಗೃಹ ಬಳಕೆ ರೂ.100<br>ಗೃಹೇತರ ರೂ.220<br>ವಾಣಿಜ್ಯ-ರೂ.500 | 433.98 | 340.70 | 774.68 | 286.46 | 488.22 | 63 |

ಪಾಲಿಕೆಯು ಬಾಕಿ ಇರುವ ನೀರಿನ ಶುಲ್ಕವನ್ನು ಬಡ್ಡಿ ಸಹಿತ ವಸೂಲಿ ಮಾಡಲು ಅಗತ್ಯ ಕ್ರಮ ಜರುಗಿಸಬೇಕೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡಲಾಗಿದೆ.

## 7.3 ಮಹಾನಗರ ಪಾಲಿಕೆಗಳಲ್ಲಿ ಮೋಟಾರು ವಾಹನಗಳ ಮೇಲೆ ಮೂಲಭೂತ ಸೌಕರ್ಯ ಉಪಕರ ವಸೂಲಿ ಮಾಡದೇ ಇರುವುದು.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ ಅನುಸೂಚಿ (III) ತೆರಿಗೆ ನಿಯಮಗಳ ನಿಯಮ 7ಬಿ ಪ್ರಕಾರ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನೋಂದಾಯಿಸುವ ಎಲ್ಲಾ ಮೋಟಾರು ವಾಹನಗಳ ಮೇಲೆ ದಿನಾಂಕ:27-02-2004ರಿಂದ ಮೂಲಭೂತ ಸೌಕರ್ಯ ಉಪಕರವನ್ನು ಈ ಕೆಳಗಿನ ದರಗಳಂತೆ ವಸೂಲಿಸಬೇಕಾಗಿರುತ್ತದೆ.

| | |
|---|---|
| 1) ದ್ವಿಚಕ್ರ ವಾಹನ | ₹. 50 |
| 2) ಲಘುವಾಹನ<br>ತ್ರಿಚಕ್ರ ವಾಹನ<br>ನಾಲ್ಕು ಚಕ್ರವಾಹನ | ₹.100<br>₹. 300 |
| 3) ಭಾರಿ ವಾಹನ<br>ಸಾರ್ವಜನಿಕ ಸಾರಿಗೆ<br>ಸರಕು ಸಾರಿಗೆ | ₹.400<br>₹. 500 |

ಮಹಾನಗರ ಪಾಲಿಕೆಗಳ ವಾರ್ಷಿಕ ಸ್ವೀಕೃತಿಗಳನ್ನು ಪರಿಸೀಲಿಸಿದಾಗ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ಮೋಟಾರು ವಾಹನಗಳ ಮೇಲೆ ಮೂಲಭೂತ ಸೌಕರ್ಯ ಉಪಕರವನ್ನು ವಿಧಿಸಿ ವಸೂಲಿಸಿದ ಹಾಗೂ ನಿಯಮಗಳಲ್ಲಿ ನಿಗಧಿಪಡಿಸಿರುವ ನಮೂನೆ 1(ಬಿ)ಯನ್ನು ಸಂಬಂಧಿಸಿದವರಿಂದ ತರಿಸಿಕೊಂಡು ಪರಿಶೀಲಿಸಿದ ದಾಖಲೆ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಸರ್ಕಾರವು ದಿನಾಂಕ:27-02-2004 ರಿಂದ ಅನ್ವಯವಾಗುವಂತೆ ತಂದಿರುವ ತಿದ್ದುಪಡಿ ಆದೇಶವನ್ನು ಎಲ್ಲಾ ಮಹಾನಗರ ಪಾಲಿಕೆಗಳು ಜಾರಿಗೆ ತರದಿರುವ ಪ್ರಯುಕ್ತ ಮಹಾನಗರ ಪಾಲಿಕೆಗಳ ಆದಾಯ ಹೆಚ್ಚಳ ಆಗದೇ ಮಹಾನಗರ ಪಾಲಿಕೆಗಳಿಗೆ ನಷ್ಟವಾಗುತ್ತಿದೆ.

ಉದಾಹರಣೆಗೆ: ನಗರಪಾಲಿಕೆ ವ್ಯಾಪ್ತಿಯಲ್ಲಿ 2009-10ರ ಸಾಲಿನಲ್ಲಿ ನೋಂದಾಯಿಸಲಾದ ಮೋಟಾರು ವಾಹನಗಳು ಹಾಗೂ ವಸೂಲಿಸಬೇಕಾಗಿದ್ದು ಉಪಕರ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಮ. ಸಂಖ್ಯೆ | ವಾಹನ | ಬಳ್ಳಾರಿ 2009-10 | | ಗುಲ್ಬರ್ಗಾ 2008-09 | |
|---|---|---|---|---|---|
| | | ನೋಂದಾಯಿತ ವಾಹನಗಳ ಸಂಖ್ಯೆ ದರ | ಮೊಬಲಗು (ರೂ.ಗಳಲ್ಲಿ) | ನೋಂದಾಯಿತ ವಾಹನಗಳ ಸಂಖ್ಯೆ ದರ | ಮೊಬಲಗು (ರೂ.ಗಳಲ್ಲಿ) |
| 1 | ದ್ವಿಚಕ್ರ ವಾಹನ | 117761 x 50 | 58,88,050 | 7562 x 50 | 3,78,100 |
| 2 | ತ್ರಿಚಕ್ರ ವಾಹನ | 4797 x 100 | 4,79,700 | 251 x 100 | 25,100 |
| 3 | ನಾಲ್ಕು ಚಕ್ರವಾಹನ | 8617 x 300 | 25,85,100 | 207 x 300 | 62,100 |
| 4 | ಪ್ಯಾಸೆಂಜರ್ ವಾಹನ | 1435 x 400 | 5,74,000 | 138 x 400 | 55,200 |
| 5 | ಗೂಡ್ಸ್ ವಾಹನ | 6100 x 500 | 30,50,000 | 324 x 500 | 162,000 |
| | | | **1,25,76,850** | | **6,82,500** |

## 7.4 ಹಿಂದಿನ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣೆ ಸಲ್ಲಿಸದಿರುವುದು.

ಪ್ರತಿವರ್ಷ, ರಾಜ್ಯ ಲೆಕ್ಕಪತ್ರ ಇಲಾಖೆಯು ರಾಜ್ಯದ 8 ಮಹಾನಗರ ಪಾಲಿಕೆಗಳ (ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಷೆಡ್ಯೂಲ್ IX ನಿಯಮ 12 ರಲ್ಲಿ ಹೇಳಿರುವಂತೆ) ಲೆಕ್ಕ ಪರಿಶೋಧನೆಯನ್ನು ಕೈಗೊಂಡು, ಲೆಕ್ಕಪರಿಶೋಧನಾ ವರದಿ ಬಿಡುಗಡೆಗೊಳಿಸಿದ ನಂತರ ಲೆಕ್ಕಪರಿಶೋಧನಾ ವರದಿಯ ಕಂಡಿಕೆಗಳಲ್ಲಿ ಸೂಚಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸುವುದಾಗಲೀ ಅಥವಾ ಆಕ್ಷೇಪಣೆಯಲ್ಲಿಟ್ಟ ಮೊತ್ತಗಳಿಗೆ ಸೂಕ್ತ ದಾಖಲೆಗಳನ್ನು ಮುಂದಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಒದಗಿಸುವುದಾಗಲೀ ಅಥವಾ ವಸೂಲಿಗೆ ಸೂಚಿಸಿದ ಮೊತ್ತವನ್ನು ಸಂಬಂಧಿಸಿದವರಿಂದ ನಿಗದಿತ ಅವಧಿಯಲ್ಲಿ ವಸೂಲಿ ಮಾಡದಿರುವ ಪ್ರಯುಕ್ತ ವರ್ಷಾವಾರು ಆಕ್ಷೇಪಣೆಗಳ ಸಂಖ್ಯೆ ಮತ್ತು ವಸೂಲಾತಿ ಮೊತ್ತ ಹೆಚ್ಚುತ್ತಲೇ ಇದೆ. ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಕೆಲವು ಆಕ್ಷೇಪಣೆಗಳು ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಜರುಗಿಸುವುದು ಬಹಳ ಮುಖ್ಯವಾಗಿರುತ್ತದೆ. ಲೆಕ್ಕ ಪರಿಶೋಧನಾ ಆಕ್ಷೇಪಣೆಗಳ ವಿಲೆಯಲ್ಲಿನ ವಿಳಂಬವು ಲೆಕ್ಕಪರಿಶೋಧನೆಯ ಮುಖ್ಯ ಉದ್ದೇಶವನ್ನೇ ನಿಷ್ಫಲಗೊಳಿಸಿದಂತಾಗುತ್ತದೆ.

